Sri N. M. KOTRABASAIAH SOGI.—It is not a public examination. Since it is not a public examination there is no question of leakage. It does not mean that we consider leakage very lightly.

Papers laid on the Table

Sri MOHAMED ALI (Minister for Transport).—I beg to lay on the Table of the House the State Transport Undertakings (Mysore Amendment) Rules, 1969—Notification No. HD 67 TMR 68 dated 15th January 1969, under section 133 (3) of the Motor Vehicles Act, 1939.

Mr. SPEAKER.—The Rules are laid on the Table.

Sri K. PUTTASWAMY (Minister for Law, Labour and Parliamentary Affairs).—On behalf of the Minister for Finance, I beg to lay on the Table of the House:

(i) The Mysore Prohibition (Intoxicating Drugs) (Amendment) Rules, 1969—Notification No. HD 121 EDC 68 dated 13th March 1969, under section 125 of the Mysore Prohibition Act 1961;

(ii) The Mysore Excise (Excise Duties) (Amendment) Rules, 1969, Notification No. HD 58 EFL 68 dated 13th February 1969 issued for section 71 (4) of the Mysore Excise Act 1965.

(iii) The Mysore Excise (Bottling of Liquor) Rules 1967—Notification No. Hd 21 EFL 68 dated 7th February 1969 under sub-section (4) of section 71 of the Mysore Excise Act, 1965.

(iv) The Annual Report and Accounts and Audit Report of the Mysore State Financial Corporation, Bangalore, for the year ended 31st March 1968—under sub-section (3) of section 38 and sub-section (7) of section 37 of the State Financial Corporation Act, 1951.

Mr. SPEAKER.—The notifications and the Report are laid on the Table of the House.

Notice of the adjournment motion regarding reported Statement of the Puri Jagadguru Sankaracharya untouchability

†ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್ (ನಿಪಸಿ).—ಸ್ವಾಮಿ, ನಾನು ಈಗ ಎರಡು ದಿವಸಗಳ ಹಿಂದೆ ಈ ಸಭೆಯ ನಿಬಂಧನೆಯ 59ನೇ ಕಾಲಂ ಪ್ರಕಾರ ಸೆಕ್ರೆಟರಿಯವರ ಮೂಲಕ ತಮಗೆ ಒಂದು ನೋಟೀಸ್ ಕೊಟ್ಟು ಇಡೀ ರಾಷ್ಟ್ರದ ಜನತೆಯ ಮನಸ್ಸನ್ನು ಕಲಕಿರುವಂಥಾ, ಒಂದು ರಾಷ್ಟ್ರದ್ರೋಹದ ಕೆಲಸ ನಡೆದಿರುವಂಥಾ ವಿಷಯದಲ್ಲಿ ಇಲ್ಲಿ ಚರ್ಚೆ ಮಾಡುವುದಕ್ಕೆ ಅವ

ಕಾಶವಾಡಿಕೊಡಬೇಕೆಂದು ಕೇಳಿದ್ದೆ. ಅದರ ಬಗ್ಗೆ ನನಗೆ ಒಂದು ಉತ್ತರವನ್ನು ಕಳುಹಿಸಿಕೊಟ್ಟಿದ್ದಾರೆ. ಅದು ಈ ರೀತಿ ಇದೆ. It is not within the purview of the State Government. The Speaker has not given consent to the same. ಸ್ವಾಮಿ ಇಂಥಾ ಒಂದು ಸನ್ನಿವೇಶದಲ್ಲಿ ಹಿಂದೆ ಹೊಂಬಾಯಿನಲ್ಲಿ ಶಿವಸೇನೆಯವರು ಕನ್ನಿಡಿಗರಮೇಲೆ ಚಳುವಳಿ ನಡೆಸಿದಾಗ ಆ ಬಗ್ಗೆ ಚರ್ಚೆ ಮಾಡುವುದಕ್ಕೆ ಈ ಸಭೆಯಲ್ಲಿ ಅವಕಾಶವನ್ನು ಕೊಟ್ಟಿದ್ದೀರಿ, ಅದೇ ರೀತಿ ಈ ಒಂದು ವಿಷಯವನ್ನೂ ಇಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕು. ಸ್ವಾಮಿ, ಇಡೀ ರಾಷ್ಟ್ರದ ಬೆನ್ನುಮೂಳೆಯಾಗಿರತಕ್ಕ 12 ಕೋಟಿ ಜನಗಳ ಮಾನವೀಯತೆಯನ್ನು ಹಾಳುಮಾಡತಕ್ಕ ರೀತಿಯಲ್ಲಿ ಮಾರ್ಚ್ 29ನೇ ತಾರೀಖು ಪಾಟ್ನಾದಲ್ಲಿ ನಡೆದ ಎರಡನೇ ಅಂತರ ರಾಷ್ಟ್ರೀಯ ಹಿಂದೂ ಸಮ್ಮೇಳನ ಉದ್ಘಾಟನಾ ಅಧಿವೇಶನದಲ್ಲಿ ಶ್ರೀ ಪೂರಿ ಶಂಕರಾಚಾರ್ಯರು ರಾಜ್ಯಾಂಗ ನಿಯಮಗಳನ್ನು ಉಲ್ಲಂಘಿಸಿದ್ದಾರೆ. ಮತ್ತು 1955ನೇ ಇಸವಿಯಲ್ಲಿ ಜಾರಿಗೆ ತಂದಂಥ ಅಸ್ಪೃಶ್ಯತಾ ನಿವಾರಣಾ ಕಾನೂನಿಗೆ ವಿರುದ್ಧವಾಗಿ ನಡೆದಿದ್ದಾರೆ. ಅವರು ರಾಷ್ಟ್ರ ದ್ರೋಹದ ಕೆಲಸವನ್ನು ಮಾಡಿದ್ದಾರೆ.

ಅಂಥ ಒಂದು ಪವಿತ್ರವಾದ ಕೆಲಸವನ್ನು ಈ ದಿವಸ ಇಲ್ಲಿ ಚರ್ಚೆ ಮಾಡುವುದು ಅವಶ್ಯಕವೆಂದು ನಾನು ಒತ್ತಾಯಪೂರ್ವಕವಾಗಿ ಹೇಳುತ್ತಿದ್ದೇನೆ. ನ್ಯಾಷನಲ್ ಅಂತಮ್ ರಾಷ್ಟ್ರದ ಪವಿತ್ರವಾದ ಒಂದು ಗ್ರಂಥ. ಅದಕ್ಕೆ ನಾವು ತರೆಬಾಗಿ ನಡೆಯಬೇಕು. ಅದಕ್ಕೆ ವಿರುದ್ಧವಾಗಿ ಒಂದು ದ್ರೋಹ ಮಾಡಿದ್ದಾರೆ. ಅಸ್ಪೃಶ್ಯತೆ ರಾಷ್ಟ್ರದಲ್ಲಿ ಯಾರೇ ಆಚರಿಸುತ್ತಾ ಇದ್ದರೂ ಶಿಕ್ಷೆಗೆ ಅರ್ಹರು. ಈ ರೀತಿ ನಿಬಂಧನೆ ಇರುವಾಗ, ಜಾತಿಯಲ್ಲಿ ಅಸ್ಪೃಶ್ಯತೆ ಇದೆ ಎಂದು ಹೇಳಲು ಹೊರಟಿದ್ದಾರೆ. ಇಂತಹ ಅನ್ಯಾಯ ಅನೀತಿ ಮತ್ತು ಅಸಾಚಾರ ಇರತಕ್ಕಂಥ ಗುರುಗಳು ಗುರುಗಳಾಗಲು ಅರ್ಹರಲ್ಲ. ಇವರು ಚಂಡಾಲರಲ್ಲಿ ಚಂಡಾಲರು ಎಂದು ಹೇಳುತ್ತೇನೆ. ನಮ್ಮ ರಾಜ್ಯ ಸರ್ಕಾರದವರು ಈ ರಾಜ್ಯಕ್ಕೆ ಅವರು ಎಂದೂ ಕೂಡ ಬರುವುದಕ್ಕೆ ಅವಕಾಶ ಕೊಡಬಾರದು. ಈ ರಾಜ್ಯ ಸರ್ಕಾರ ಅಸ್ಪೃಶ್ಯತೆ ಕಳಂಕವೆಂದು ಕಾನೂನು ಬದ್ಧವಾಗಿ ಒಪ್ಪತಕ್ಕದ್ದೇ ಆದರೆ, ಈಗಲೇ ನಿರ್ಣಯ ಮಾಡಿ ಪಾರ್ಲಿಮೆಂಟ್ ಮತ್ತು ಕೇಂದ್ರ ಸರ್ಕಾರಕ್ಕೆ ಕಳಿಸಿಕೊಟ್ಟು ಅವರನ್ನು ಈ ದಿವಸವೇ ಅರೆಸ್ಟ್ ಮಾಡಿಸಿ ಕಠಿಣ ಶಿಕ್ಷೆಗೆ ಒಳಪಡಿಸಬೇಕೆಂದು ಹೇಳಬೇಕು. ರಾಜ್ಯಾಂಗಬಾಹಿರವಾದ ನೀತಿಯನ್ನು ಅವರು ಅನುಸರಿಸಿರುವುದರಿಂದ ಅವರನ್ನು ರಾಜದ್ರೋಹಿ ಎಂದು ಕರೆಯಬೇಕು. ಬ್ರಾಹ್ಮಣಕುಲ ಹಿಂದೂ ಧರ್ಮದಲ್ಲಿ ಇರಬೇಕಾದರೆ, ಬ್ರಾಹ್ಮಣರೆಲ್ಲರೂ ಅವರನ್ನು ಬಹಿಷ್ಕರಿಸಬೇಕು. ಪತ್ರಿಕೆಗಳು ಲೇಖನಗಳನ್ನು ಬರೆಯಬೇಕು. ಪ್ರಜಾವಾಣಿಯವರು ದುರ್ವಾಸರ ವರ್ತನೆ ಎಂದು ಬರೆದು ಖಂಡಿಸಿದ್ದಾರೆ. ಅವರು ಅಲಂಕರಿಸಿದ ಪೀಠಕ್ಕೆ ಮತ್ತು ಅವರ ಸ್ಥಾನಕ್ಕೆ ತಕ್ಕಂತೆ ಮಾತನಾಡಿಲ್ಲ. ಭಾರತದ 12 ಕೋಟಿ ಜನ ಮತ್ತು ಕರ್ನಾಟಕದ 45 ಲಕ್ಷ ಹರಿಜನ ಮತ್ತು ಗಿರಿಜನರಿಗೆ ಇಂತಹ ದ್ರೋಹವನ್ನು ಯಾರೂ ಮಾಡಿರಲಿಲ್ಲ. ಅಂತಹ ಒಂದು ರಾಷ್ಟ್ರಘಾತುಕ ಕೃತ್ಯವನ್ನು ಮಾಡಿದ್ದಾರೆ. ರಾಜ್ಯಾಂಗಕ್ಕೆ ವಿರುದ್ಧವಾಗಿ ವರ್ತಿಸಿದ್ದಾರೆ. ಬ್ರಾಹ್ಮಣ ಕುಲ ಇದ್ದರೆ, ಹಿಂದೂ ಧರ್ಮದಲ್ಲಿ ನೀತಿ ಇದ್ದರೆ ಸರ್ವಧರ್ಮ ಸಮತ್ವ ಇದ್ದರೆ ಪ್ರಜಾಪ್ರಭುತ್ವದಲ್ಲಿ ನೀತಿ ಏನಾದರೂ ಇದ್ದರೆ ಸರ್ಕಾರದವರು ಕೂಡಲೇ ಶ್ರೀ ಶಂಕರಾಚಾರ್ಯರನ್ನು ಅವರ ಗುರು ಪೀಠದಿಂದ ವಜಾ ಮಾಡಬೇಕು. ಮಹಾತ್ಮಗಾಂಧಿಯವರು ಇಂದು ಜೀವಂತದಲ್ಲಿ ಇದ್ದಿದ್ದರೆ ಇಂತಹ ರಾಷ್ಟ್ರಘಾತುಕವನ್ನು ಅವರು ತೀವ್ರವಾಗಿ ಖಂಡಿಸುತ್ತಿದ್ದರು. 12 ಕೋಟಿ ಜನರನ್ನು ಅವರು ಈ ದಿವಸ ಅಸ್ಪೃಶ್ಯರು ಎಂದು ಹೇಳಿರುವುದರಿಂದ ಅವರು ರಾಜ್ಯಾಂಗಬದ್ಧವಾದ ನೀತಿಗೆ ವಿರುದ್ಧವಾಗಿ ನಡೆದಿರತಕ್ಕ ವ್ಯಕ್ತಿಯಾಗಿದ್ದಾರೆ. ಅಂತಹವರು ಸಮಾಜಕ್ಕೆ ದೊಡ್ಡವರಲ್ಲ, ರಾಜ್ಯಕ್ಕೆ ದೊಡ್ಡವರಲ್ಲ. ರಾಷ್ಟ್ರಕ್ಕೂ ದೊಡ್ಡವರಲ್ಲ. ಇಂತಹ ವ್ಯಕ್ತಿಯನ್ನು ಶಿಕ್ಷಿಸಲೇಬೇಕು ರಾಷ್ಟ್ರದಲ್ಲಿ ಈ ಬಗ್ಗೆ ಚಳುವಳಿ ನಡೆಯಬೇಕು. ಸಾಮಾಜಿಕ ಕ್ರಾಂತಿ ನಡೆಯಬೇಕು. ಭೀಮಸೇನೆ ಹುಟ್ಟಿದೆ ಎಂದು ಹೇಳುವುದಾದರೆ ಇಂತಹ ಅಮೋಘ್ಯರಿಂದ ನುತ್ತು ಇಂತಹ ಅನೀತಿಯ ತರಿಂದ. ಪಾರ್ಲಿಮೆಂಟ್‌ನಲ್ಲಿ ಈ ಬಗ್ಗೆ ವಿಶೇಷವಾದ ಚರ್ಚೆಯಾಗಿದೆ. ಬಿಹಾರ ಸರ್ಕಾರದವರು ಇವರುಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಎಲ್ಲಾ ರಾಜ್ಯ ಸರ್ಕಾರಗಳವರೂ ಸಹ ನಿರ್ಣಯ ಮಾಡಿ ಕಳಿಸಬೇಕು. ಅವನನ್ನು ಶಿಕ್ಷೆಗೆ ಗುರಿ ಮಾಡಲು ತಕ್ಕ ಕ್ರಮ ತೆಗೆದುಕೊಳ್ಳಬೇಕು. ಇಂತಹ ಗುರುಪೀಠದಲ್ಲರತಕ್ಕ ಅವನನ್ನು ಬಹಿಷ್ಕಾರ ಮಾಡಬೇಕು. ರಾಜ್ಯದಲ್ಲಿ ಯಾವ ವಿಧವಾದ ಅಸ್ಪೃಶ್ಯತೆ ಇಲ್ಲದಿರುವಾಗ ಅವರು ಹುಟ್ಟಿನಲ್ಲಿ ಅಸ್ಪೃಶ್ಯತೆ ಇದೆ ಎಂದು ಹೇಳುವ ಹಕ್ಕು ತಮಗೆ ಇದೆ ಎಂದು ಹೇಳಿಕೊಂಡಿದ್ದಾರೆ. ಇದು ಮಾನವೀಯತೆಯು ಧರ್ಮವಲ್ಲ. ವ್ಯಾಸ ಮಹರ್ಷಿಗಳನ್ನು ಬ್ರಾಹ್ಮಣರು ಪೂಜೆ ಮಾಡುತ್ತಾರೆ. ಅವರು ಬ್ರಾಹ್ಮಣಕುಲದಲ್ಲಿ ಹುಟ್ಟಿದವರು ಅಲ್ಲವೇ ? ವಶಿಷ್ಠರು ದೊಂಬರ ಕುಲದಲ್ಲಿ ಹುಟ್ಟಿದವರು ಅಲ್ಲವೇ ? ಜಾತಿಯಲ್ಲಿ ಏನಿದೆ, ಆದ್ದರಿಂದ ಈ ಜಾತಿ ಭೂತವನ್ನು ಶಂಕರಾಚಾರ್ಯರು ಸೃಷ್ಟಿಸಿರುವುದರಿಂದ ಅವರು ಗುರುಪೀಠದಲ್ಲಿರಬಾರದು, ಅವರ

(ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್)

ಸ್ಥಾನದಲ್ಲಿಯಾಗಲೀ ಇರುವುದಕ್ಕೆ ಅರ್ಹರಾಗಿಲ್ಲ. ಮತ್ತು ಅವರು ಆ ರೀತಿ ಇದ್ದರೆ ಆ ಗುರು ಪೀಠಕ್ಕೆ ಗೌರವ ಬರುವುದಿಲ್ಲ. ಇವರು ಅಧರ್ಮಿಗಳು ಮತ್ತು ರಾಷ್ಟ್ರದ್ರೋಹಿಗಳಾಗಿದ್ದಾರೆ. ಆದ್ದರಿಂದ ಅವರಿಗೆ ಸೂಕ್ತವಾದ ಶಿಕ್ಷೆಯನ್ನು ಕೊಡಬೇಕೆಂದು ನಿರ್ಣಯ ಮಾಡಿ ನಮ್ಮ ಸರ್ಕಾರದವರು ಕೇಂದ್ರ ಸರ್ಕಾರಕ್ಕೆ ಕಳಿಸುವುದರ ಮೂಲಕ ಒತ್ತಾಯ ಮಾಡಬೇಕೆಂದು ಸರ್ಕಾರಕ್ಕೆ ತಮ್ಮ ಮೂಲಕ ಅತ್ಯಂತ ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

† ಶ್ರೀ ಎಸ್. ಬಂಗಾರಪ್ಪ (ಸೊರಬ).—ಮಾನ್ಯ ಅಧ್ಯಕ್ಷರೇ, ಮಾನ್ಯ ಜಯಪ್ರಕಾಶ್‌ನಾರಾಯಣ್ ಅವರು ಎತ್ತಿರುವ ವಿಷಯದ ಬಗ್ಗೆ ನಾನೂ ಕೂಡ ಒಂದು ಸಲುವಳಿ ಸೂಚನೆಯನ್ನು ಕಳುಹಿಸಿದ್ದೇನೆ. ಪಾಟ್ನಾದಲ್ಲಿ ನಡೆದ ಎರಡನೇ ಹಿಂದೂ ಮಹಾಸಮ್ಮೇಳನದಲ್ಲಿ ಪೂರಿ ಶಂಕರಾಚಾರ್ಯರು ದೊಡ್ಡ ಮಠದಲ್ಲಿ ಇರುವವರು, ದೊಡ್ಡ ಸ್ಥಾನದಲ್ಲಿ ಇರುವವರು, ದೇಶಕ್ಕೆ ಅಪಚಾರವೆಸಗುವ, ಮಾನವ ಕುಲಕ್ಕೆ ಅಪಚಾರವೆಸಗುವ ಮಾತನ್ನು ಹೇಳಿದ್ದಾರೆ. ಈ ಬಗ್ಗೆ ಶ್ರೀ ಜಯಪ್ರಕಾಶ್ ನಾರಾಯಣ್ ಅವರು ಹೇಳಿದ್ದಾರೆ, ಅವರು ಹೇಳಿದ್ದನ್ನೇ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಮಹಾತ್ಮಗಾಂಧಿಯವರು ನಮಗೆ ಸ್ವಾತಂತ್ರ್ಯಬಂದಮೇಲೆ ತಮ್ಮ ಕೊನೆಯ ಉಸಿರು ಇರುವವರೆಗೂ ಕೂಡ ಅಸ್ಪೃಶ್ಯತೆಯನ್ನು ಈ ದೇಶದಲ್ಲಿ ತೊಡೆದುಹಾಕುವುದಕ್ಕೆ ಪ್ರಯತ್ನಪಟ್ಟರು. ಹಿಂದುಳಿದವರು ಕೂಡ ಮಾನವರೇ, ಅವರಿಗೂ ಕೂಡ ಬೇರೆಯವರಂತೆ ಕಣ್ಣು, ಮೂಗೂ, ಕಿವಿ ಮುಂತಾದವುಗಳು ಇವೆ ಎಂಬುದನ್ನು ಗಾಂಧಿಯವರು ಉಪದೇಶ ಮಾಡಿದರು. ಬೇರೆ ಜನಾಂಗಕ್ಕೆ ಸಿಗುವ ಅನುಕೂಲಗಳು ಇವರಿಗೂ ಕೂಡ ರಾಜ್ಯಾಂಗಬದ್ಧವಾಗಿ ದೊರಕಬೇಕು ಎಂಬ ಬಗ್ಗೆ ಅವರು ಹೋರಾಟ ನಡೆಸಿದರು. ಈ ಹೋರಾಟದಲ್ಲಿ ಎಲ್ಲವನ್ನೂ ಸಹ ಅವರು ಸಾಧಿಸುವುದಕ್ಕೆ ಆಗದಿದ್ದರೂ ಕೂಡ ಒಂದರಲ್ಲಿ ಯಶಸ್ವಿಯಾದರು. ಇವರು ಊರ ಹೊರಗೆ ಇರುವ ಜನವಾದ್ದರಿಂದ ಇವರನ್ನು ವಾಡಿಗ, ಹೊರೆಯ ಎಂದು ಕರೆಯಲಾಗುತ್ತಿತ್ತು. ಈ ಹೆಸರಿನಿಂದ ಅವರನ್ನು ಕರೆಯುವುದನ್ನು ತಪ್ಪಿಸಿ ಹರಿಜನರು ಎಂಬ ನಾಮಕರಣವನ್ನು ಗಾಂಧಿಯವರು ಮಾಡಿಸಿದರು. ತಮ್ಮ ಜೀವಮಾನದ ಬಹುಭಾಗವನ್ನು ಇದಕ್ಕಾಗಿ ವ್ಯಯ ಅವರು ಮಾಡಿದರು. ಇವತ್ತಿನ ದಿವಸ ದೇಶದಲ್ಲಿ ಅನೇಕ ಮತಗಳು ಇವೆ. ಅದಕ್ಕೆ ಸೇರಿದಂತೆ ಭಕ್ತರು ಸಹ ಇದ್ದಾರೆ. ಪೂರಿ ಸ್ವಾಮಿಗಳ ಭಕ್ತರು ಮೈಸೂರಿನಲ್ಲಿಯೂ ಸಹ ಇರಬಹುದು. ಅಸ್ಪೃಶ್ಯತೆಯ ನಿವಾರಣೆಯ ಬಗ್ಗೆ ಕೇಂದ್ರ ಸರ್ಕಾರದವರು ಮಾಡಿರುವ ಕಾನೂನನ್ನು ರಾಜ್ಯಸರ್ಕಾರಗಳು ಸಹ ಪಾಲನೆ ಮಾಡಬೇಕೆಂದು ಕೇಂದ್ರ ಸರ್ಕಾರದವರು ರಾಜ್ಯಸರ್ಕಾರಗಳಿಗೆ ಆದೇಶ ಕೊಟ್ಟಿದ್ದಾರೆ. ಇದಕ್ಕಾಗಿ ನಾವು ಪೋಲೀಸರನ್ನು ಸಂಬಳಕೊಟ್ಟು ಇಟ್ಟಿದ್ದೇವೆ. ಅವರು ಕೆಲಸ ಮಾಡುತ್ತಿದ್ದಾರೆ. ದೊಡ್ಡ ಸ್ಥಾನದಲ್ಲಿರುವ ಪೂರಿ ಸ್ವಾಮಿಗಳು ಎಲ್ಲಾ ಜನರಿಗೂ ಒಳ್ಳೆಯ ಭಾವನೆ ಬರುವಂತಹ ಮಾತುಗಳನ್ನು ಹೇಳಬೇಕು. ಮತ್ತು ಒಳ್ಳೆಯ ಕೆಲಸಗಳನ್ನು ನಿರ್ವಹಿಸಬೇಕು. ಆದರೆ ಆ ರೀತಿ ಮಾಡದೆ ಜಾತಿಯಿಂದ ಜಾತಿಗೆ ದ್ವೇಷ ಹುಟ್ಟಿಸುವ ಮಾತುಗಳನ್ನು ಆಡುತ್ತಿದ್ದಾರೆ. ಕಳಂಕಪ್ರಾಯವಾದ ಮಾತುಗಳನ್ನು ಆಡುತ್ತಿದ್ದಾರೆ. ಅಸ್ಪೃಶ್ಯರನ್ನು ಮುಟ್ಟಬಾರದು ಎಂದು ಹೇಳುತ್ತಿದ್ದಾರೆ. ಇದು ಒಂದು ನೀಚ ಕೆಲಸವೆಂದು ಹೇಳುತ್ತೇನೆ. ಉಪಾಚ್ಯಾರಿ ಸ್ಥಾನದಲ್ಲಿರುವ ಈ ಸ್ವಾಮಿಗಳು ಹಿಂದೂ ಧರ್ಮಕ್ಕೆ ಒಪ್ಪದಿರುವ ಮಾತನ್ನು ಹೇಳಿದ್ದಾರೆ. ಅಸ್ಪೃಶ್ಯರನ್ನು ದೂರ ಇಡಬೇಕೆಂದು ಅವರು ಹೇಳಿರುವುದು ಹಿಂದೂ ಧರ್ಮಕ್ಕೆ ಒಪ್ಪುತ್ತದೆಯೇ ಎಂದು ಕೇಳುತ್ತೇನೆ. ಇದರಿಂದ ದೇಶದಲ್ಲಿ ಒಡಕು ಉಂಟಾಗುವುದಕ್ಕೆ ಅವಕಾಶವಾಗುತ್ತದೆ. ಈ ಜನರನ್ನು ಸಮಾಜದಿಂದ ಹೊರಗಿಡುವುದಾದರೆ ನಾಳೆದಿವಸ ಅವರು ಸಹ ಇವರನ್ನು ಹೊರಗಿಡುವುದಕ್ಕೆ ಹೋರಾಟ ಮಾಡಬೇಕಾಗುತ್ತದೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ಜಾಗ್ರತೆ ತಮ್ಮ ಭಾಷಣ ಮುಗಿಸಬೇಕು.

ಶ್ರೀ ಎಸ್. ಬಂಗಾರಪ್ಪ.—ಕೇಳು ಮೇಲು ಎನ್ನುವ ಒಂದು ಭಾವನೆ ಮಾಡಿಕೊಂಡು ಕೆಲಸ ಕಾರ್ಯಗಳನ್ನು ಮಾಡುತ್ತಿದ್ದಾರೆ. ಅಷ್ಟೇ ಅಲ್ಲ ಮಾನ್ಯ ಸದಸ್ಯರಾದ ಶ್ರೀ ಜಯಪ್ರಕಾಶ್ ನಾರಾಯಣ್‌ರವರು ಹೇಳಿದಂತೆ ನ್ಯಾಷನಲ್ ಆಂಥಂ ಆಗುವಾಗ ಅದಕ್ಕೆ ಗೌರವ ಸೂಚಿಸದೆ ಹೊರಟು ಹೋದರು. ಮತ್ತು ಜನಗಣಮನ ಹಾಡುವುದು ಬೇಕಾಗಿಲ್ಲ ಎಂದು ದೇಶದ ಜನರಲ್ಲಿ ಒಂದು ರೀತಿ ಕೆಟ್ಟ ಭಾವನೆ ಬರಲು ಅವಕಾಶವಾಗುವಂತೆ ಹೇಳಿದ್ದಾರೆ. ಇದಕ್ಕೆ ಬದಲಾಗಿ ಪೂರಿ ಜಗದ್ಗುರುಗಳೇ ಕೇಂದ್ರ ಸರಕಾರದೊಡನೆ ವ್ಯವಹಾರ ಮಾಡಿ ಈಗ ಮಾಡಿರುವ ರಾಷ್ಟ್ರಗೀತೆ ಸರಿಯಾಗಿಲ್ಲ, ಇದಕ್ಕೆ ಬದಲು ಎಲ್ಲ ಜನರಲ್ಲಿಯೂ ಒಗ್ಗಟ್ಟು ಬರುವಂತೆ ಬೇರೆ ಯಾವುದಾದರೂ ಒಂದು ಗೀತೆಯನ್ನು ಹಾಡಬಹುದು ಎಂದು ಸೂಚಿಸಬಹುದಾಗಿತ್ತು. ಇದನ್ನು ಮಾಡದೇ ಅವರು ಹಿಂದೂ ಧರ್ಮಕ್ಕೇ ಭೂಷಣವಲ್ಲದಂತಹ ಕೆಲಸಗಳನ್ನು ಏತಕ್ಕಾಗಿ ಮಾಡಲು ಹೋದರು ಎಂದು ಇಲ್ಲಿ ಕೇಳ

ಬೇಕಾಗಿದೆ. ಇವೊತ್ತು ದೇಶದಲ್ಲಿರುವ ಅಸ್ಪೃಶ್ಯತೆಯನ್ನು ತೊಡೆದುಹಾಕಬಾರದು, ಇವರನ್ನು ದೂರ ಇಡಬೇಕು ಎಂದು ಹೇಳುವಷ್ಟು ಕೀಳುಮಟ್ಟಕ್ಕೆ ಇಳಿಯಬಾರದು. ನಾನೂ ಕೂಡ ಹಿಂದೂ. ಆದರೂ ಇಂತಹ ಕೀಳುಮಟ್ಟಕ್ಕೆ ನಾನು ಇಳಿಯಲು ಬರುವುದಿಲ್ಲ. ಇವೊತ್ತು ದೇಶದಲ್ಲಿ ಸಮಾಜವಾದ ಮಾಡಬೇಕು, ಸಮತಾವಾದ ಮಾಡಬೇಕು ಎಂದು ಹೇಳುವ ಜನ ಇಂದು ಅಸ್ಪೃಶ್ಯತೆಯನ್ನು ದೂರಮಾಡುವ ಕೆಲಸಕ್ಕೆ ಸ್ವಲ್ಪ ಹಣ ಮಾತ್ರ ಕೊಟ್ಟಿದ್ದಾರೆ. ಇದಕ್ಕಿಂತ ಇನ್ನೇನು ಮಾಡಿದ್ದಾರೆ? ಇವೊತ್ತು ಕಾಂಗ್ರೆಸ್ಸು ಸರಕಾರ ನಾವು ಅಸ್ಪೃಶ್ಯರನ್ನು ಉದ್ಧಾರ ಮಾಡಿದ್ದೇವೆ, ಇಷ್ಟು ಹಣ ಕೊಟ್ಟಿದ್ದೇವೆ, ಎಂದು ಹೇಳುವುದಾದರೆ ಅದು ತಪ್ಪು. ಇವೊತ್ತು ಇನ್ನೂ ಎಲ್ಲ ಊರುಗಳಲ್ಲಿಯೂ ಹರಿಜನರನ್ನು ಊರಿನ ಹೊರಗೆ ಇರುವ ಸ್ಲಂ ಏರಿಯಾದಲ್ಲೇ ಇರುವಂತೆ ಮಾಡಿದ್ದಾರೆ. ಇಂತಹ ಹಾಳು ಕೊಂಪೆಯಲ್ಲಿರತಕ್ಕ ಜನರನ್ನು ಇದರಲ್ಲೂ ಫಿಸಿಕಲೀ ಹಾಗೂ ಮೆಂಟಲೀ ಬ್ಯಾಕ್‌ವರ್ಡ್ ಎನ್ನುವಂತಹ ಜನರನ್ನು ದೂರ ಇರಬೇಕು ಎಂದು ಹೇಳುವ ಪೂರಿ ಜಗದ್ಗುರುಗಳು ಇಲ್ಲಿ ಏಕೆ ಇರಬೇಕು? ಇವೊತ್ತು ಎಷ್ಟೋ ಕಡೆಗಳಲ್ಲಿರುವ ಮಠಾಧೀಶರು ಒಳ್ಳೆಯ ಕೆಲಸಗಳನ್ನು ಮಾಡಿಕೊಂಡು ಬಂದು ಶಾಲೆಗಳನ್ನು ನಡೆಸುತ್ತಿದ್ದಾರೆ. ಆದರೆ ಜನರ ಮನಸ್ಸನ್ನು ಕಲಕುವಂತಹ ಹೇಳಿಕೆಗಳನ್ನು ಕೊಟ್ಟರೆ, ಅವರು ದೇಶಕ್ಕೆ ದ್ರೋಹಮಾಡಿದಂತಾಗುತ್ತದೆ, ರಾಷ್ಟ್ರ ದ್ರೋಹ ಮಾಡಿದಂತಾಗುತ್ತದೆ. ಮುಂದೆ ಇಂತಹ ಕಳಂಕ ಬರುವುದಕ್ಕೆ ಅವಕಾಶ ಕೊಡಬಾರದು. ಇಂತಹ ಹೇಳಿಕೆಗಳನ್ನು ಸರಕಾರ ಖಂಡಿತ ಖಂಡನೆ ಮಾಡಬೇಕು. ಸಾಧ್ಯವಾದರೆ ಇಂತಹ ಸ್ವಾಮಿಗಳನ್ನು ಅರೆಸ್ಟ್ ಮಾಡಬೇಕು. ಇದಕ್ಕೆ ಕಾನೂನು ಪ್ರಕಾರ ಅವಕಾಶ ಇದೆಯೋ ಎನ್ನುವುದನ್ನೂ ವಿಚಾರ ಮಾಡಬೇಕಾಗುತ್ತದೆ. ಮೈಸೂರು ರಾಜ್ಯಕ್ಕೇ ಅಲ್ಲ ಇತರ ರಾಜ್ಯಗಳಿಗೂ ಇವರು ದ್ರೋಹ ಮಾಡಿದ್ದಾರೆಂದು ಹೇಳಬಹುದು. ಇದರ ಬಗ್ಗೆ ತಾವು ಇಲ್ಲಿ ಚರ್ಚೆ ಮಾಡಲು ಅವಕಾಶ ಮಾಡಿಕೊಳ್ಳಬೇಕೆಂದು ಕೇಳುತ್ತೇನೆ.

Sri V. N. PATIL.—Sir, I may be given an opportunity to speak.

Mr. SPEAKER.—I want to know whether the Hon. Minister for Parliamentary Affairs has anything to say in the matter.

Sri J. P. SARVESH.—Sir, I may be given at least one or two minutes.

Sri M. H. JAYAPRAKASH NARAYAN.—Sir, he has also signed the notice. He may be given an opportunity.

Mr. SPEAKER.—I have not permitted any discussion. I want to hear the Hon. Minister for Parliamentary Affairs.

Sri V. N. PATIL.—Sir, I am on a point of order.

Mr. SPEAKER.—When I am addressing the House there cannot be any point of order.

† Sri V. N. PATIL.—Sir, I may be heard on a point of order. My point of order is, when any important subject is being discussed, we must know, firstly whether we have got any jurisdiction; secondly, whether we have any powers to punish or summon somebody; thirdly, just because we have no provisions in the rules of procedure, are we to leave criminals without punishing them, and fourthly, What procedure shall we adopt to find out a remedy in order to curb such anti-national elements. The Chair may kindly give a ruling on these points. Then, Sir, the hon. member Sri Jayaprakash Narayan stated that such criminals must be arrested. I say, we cannot arrest him and the request of my hon. friend Mr. Jayaprakash Narayan cannot be considered, because we have not made any law in this behalf; I think at best we could ban the entry of such a person into our State. Persons who come and create such bitterness between one community and

(SRI V. N. PATIL)

another community and say that one is born as a sinner and the other is born as a superior should be banned from entering the State. In future, in order to see that such bitterness is not generated. We should not allow such persons to enter into our State. I also know when some Jagat Gurus come, in order to show that with their blessings they are prospering, several of our Ministers show so much of respect to them. One Mr. Karvalkar has given a statement to a weekly in Poona. Such fellows should be banned.....

Mr. SPEAKER.—The Hon. Member Sri Patil should understand that there is a limit to make such observations.

Sri H. N. NANJE GOWDA (Arkalgud).—Sir, we cannot tolerate such things. It is too much on the part of Mr. V. N. Patil to say like that. Is that the way of talking in the House? I think the rules are not being observed.

3-30 P. M.

Mr. SPEAKER.—I quite agree with Sri Nanje Gowda. Mr. Patil has abused the rules. There is absolutely no force in the point of order.

† Sri J. P. SARVESH.—Mr. Speaker, Sir, Jagadgura Shankara Charya has got a sizeable following in Mysore State. There are people who bluntly believe him. But he is spreading hatred. You say the people have progressed in the past 20 years. This Jagadguru is undoing it. He is a national criminal. This House is competent to think what kind of restriction could be imposed on such a criminal who is preaching hatred. Being the Head of the Hindu religion, he is the person actually doing harm to the Hindu religion. This man is against conversion of persons from one religion to another. This man is against the fundamental right of the citizen. Recently, a resolution was passed restricting conversion of people to Christianity. It is against the Constitution. There must be complete freedom for any person of any religion and they must be free to get converted. He cannot say that I cannot embrace another religion. Mr. Dhat has said in his book " 'O' God don't make me to be born in an Hindu family". This prophecy is coming true. I support the demand of Sri V. N. Patil that the entry of this Jagadguru should be banned and he should not be allowed to come to Mysore State because he is preaching hatred.

† ಶ್ರೀ ಕೆ. ಎಚ್. ರಂಗನಾಥ್ (ಮೂಡಗೆರೆ).—ಸ್ವಾಮಿ, ಪುರಿ ಶಂಕರಾಚಾರ್ಯರು ಹೇಳಿರುವ ವಿಚಾರಗಳು ಪತ್ರಿಕೆಗಳಲ್ಲಿ ಬಂದಿದೆ. ಅವರು ಒಂದು ಪತ್ರಿಕಾ ಸಮ್ಮೇಳನವನ್ನು ಕರೆದು ಒಂದು ಹೇಳಿಕೆ ಕೊಟ್ಟು ಒಂದು ಎಕ್ಸ್‌ಟ್ರೀಮ್ ಸ್ಟ್ಯಾಂಡ್ ತೆಗೆದುಕೊಂಡಿದ್ದಾರೆ. ಏನು ಹೇಳಬೇಕು, ಏನು ಹೇಳಬಾರದು ಎನ್ನುವುದು ಅವರ ಹಕ್ಕು. ಅವರ ಬಾಯಿ ಮುಚ್ಚತಕ್ಕ ಅಧಿಕಾರ ನಮಗೆ ಇಲ್ಲ. ಸರ್ಕಾರ ಈ ದಿವಸ ನನ್ನನ್ನು ನೇಣು ಹಾಕಬಹುದು ಎನ್ನುವ ಮಾತನ್ನು ಅವರು ಏಕೆ ಹೇಳಿದ್ದಾರೆ ಎನ್ನುವುದರ ಅರ್ಥವನ್ನು ಗಮನಿಸುವುದಾದರೆ ಭಾರತದಲ್ಲಿ ಇಂಥ ಒಂದು ನಿಲುವನ್ನು ಒಬ್ಬ ದೊಡ್ಡ ಅಥವಾ ಸಣ್ಣ ವ್ಯಕ್ತಿ ತೆಗೆದುಕೊಂಡರೆ, ಜಾತಿ ಜಾತಿಗಳಲ್ಲಿ ವೈಷಮ್ಯ

ಪ್ರತಿಪಾದನೆ ಮಾಡಿದರೂ ಕೂಡ ಯಾವ ಸರ್ಕಾರ ನನ್ನಮೇಲೆ ಕ್ರಮ ತೆಗೆದುಕೊಳ್ಳುವುದಿಲ್ಲ ಎನ್ನುವ ದಿಟ್ಟತನದಿಂದ ಅವರು ಆ ಹೇಳಿಕೆ ಕೊಟ್ಟಿರಬಹುದು ಎಂದು ನಾನು ಭಾವನೆ ಮಾಡುತ್ತೇನೆ. ಆದರೆ ಅವರು ನಾನು ಸೇರಿರತಕ್ಕ ವರ್ಗವನ್ನು ಅಸ್ಪೃಶ್ಯರು ಎಂದು ಕರೆದಾಗ, ಅಷ್ಟುಮಾತ್ರಕ್ಕೆ ನಾನು ಅಸ್ಪೃಶ್ಯನೆಂದು ತಿಳಿದುಕೊಳ್ಳುವುದಿಲ್ಲ. ಅವರು ಆ ರೀತಿ ಪ್ರತಿಪಾದನೆ ಮಾಡಿರುವುದಕ್ಕೆ ಹಿಂದೂ ಧರ್ಮ ಶಾಸ್ತ್ರದಲ್ಲಿ ಕೆಲವು ಉಲ್ಲೇಖಗಳಿವೆ, ಆ ಆಧಾರದಮೇಲೆ ಮಾತನಾಡುತ್ತಿದ್ದೇನೆಂದು ಅವರು ಹೇಳುತ್ತಾರೆ. ಅಸ್ಪೃಶ್ಯತಾ ನಿವಾರಣಾ ಕಾನೂನು ಪ್ರಕಾರ ಅಬೆಟಿಂಗ್ ಎಂದು ಏನು ಹೇಳುತ್ತಾರೆ, ಪ್ರತಿಪಾದನೆ ಮಾಡುವ, ಅದಕ್ಕೆ ಪುಷ್ಟೀಕರಣ ಮಾಡುವ ಸಾಹಿತ್ಯ ವಗ್ಯೆರೆ ಎಲ್ಲವೂ ಏನಿವೆ ಅವು ಕಾನೂನುಬದ್ಧವಾಗಿ ಬಹಿಷ್ಕಾರಕ್ಕೆ ಯೋಗ್ಯವಾದ ವಸ್ತುಗಳು. ನಾನು ತಮ್ಮ ಮೂಲಕ ಸರ್ಕಾರವನ್ನು ಪ್ರಾರ್ಥನೆ ಮಾಡಿಕೊಳ್ಳುವುದು ಏನೆಂದರೆ ಹಿಂದೂ ಧರ್ಮದ ಎಲ್ಲ ಶಾಸ್ತ್ರಗಣ ಪರಿಣತನೂ ನಾನಲ್ಲ. ಶಂಕರಾಚಾರ್ಯರು ಒಂದುವೇಳೆ ಹಾಗೆ ಭಾವಿಸಿದ್ದರೆ ಅದೂ ತಪ್ಪು ಎಂದು ನನ್ನ ಭಾವನೆ. ಒಂದುವೇಳೆ ಅದು ಇದ್ದು, ಅವರು ಏನು ಉಲ್ಲೇಖ ಮಾಡಿರುತ್ತಾರೆ ಅದನ್ನು ಅವರು ಪುಷ್ಟೀಕರಿಸುವುದಾದರೆ, ಅದು ನಿಜವಾಗಿದ್ದರೆ, ಸರ್ಕಾರ ಅದನ್ನು ಪತ್ತೆ ಹಚ್ಚಿ, ಯಾವ ಬಗೆಯ ಆಧಾರವಿದೆ ಎನ್ನುವುದನ್ನು ಸಾರ್ವಜನಿಕರ ಮುಂದೆ ಇಟ್ಟು ಒಂದುವೇಳೆ ಅಸ್ಪೃಶ್ಯತೆಯನ್ನು ಪುಷ್ಟೀಕರಿಸುವುದಾದರೆ ಅದನ್ನು ದೇಶಾದ್ಯಂತ ಬ್ಯಾನ್ ಮಾಡುವುದಕ್ಕೆ ಸಲಹೆ ಮಾಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಯಾವ ರಾಷ್ಟ್ರ ಗೀತೆಯನ್ನು ಎಲ್ಲರೂ ಕೂಡ ಮಾನ್ಯತೆ ಮಾಡಬೇಕು ಎಂದು ಏನು ಹೇಳುತ್ತೀವೆ ಅದನ್ನು ಪ್ರಜಾಪ್ರಭುತ್ವ ತತ್ವಕ್ಕೆ ವಿರೋಧವಾದುದು ಎಂದು ಶಂಕರಾಚಾರ್ಯರು ಹೇಳಿದ್ದಾರೆ. ಅವರಿಗೆ ಸ್ವಲ್ಪ ಹುಚ್ಚು ಹಿಡಿದಿರಬಹುದೋ ಏನೋ, ಅವರ ತಲೆ ಸರಿಯಿಲ್ಲವೋ ಏನೋ ಎನ್ನುವ ಭಾವನೆ ಬರುತ್ತದೆ. ಸರ್ಕಾರ ಇದರ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಪಡಬೇಕು. ಕೇಂದ್ರ ಸರ್ಕಾರದವರು ಕ್ರಮ ತೆಗೆದುಕೊಳ್ಳಬೇಕು, ಮೈಸೂರು ಸರ್ಕಾರ ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ ಎಂದು ಹೇಳುವುದಾದರೂ ಕೂಡ ಎಲ್ಲ ಪತ್ರಿಕೆಗಳಲ್ಲಿಯೂ ಈ ವಿಚಾರಗಳು ಬರುತ್ತಿವೆ. ಕೆಲವರು ಮೂಢ ನಂಬಿಕೆಯನ್ನು ಇಟ್ಟುಕೊಂಡಿರುತ್ತಾರೆ. ನಮ್ಮ ಹಿಂದೂ ಶಾಸ್ತ್ರದಲ್ಲಿ ಶಂಕರಾಚಾರ್ಯರು ಹೇಳಿರುವ ರೀತಿಯಲ್ಲಿ ಇರಬಹುದು ಎಂದು ತಿಳಿದುಕೊಳ್ಳುವವರೂ ಇದ್ದಾರೆ. ಕೇಂದ್ರ ಸರ್ಕಾರಕ್ಕೆ ನಮ್ಮ ಸರ್ಕಾರದವರು ತಿಳಿಸಿ ಸೂಕ್ತ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

† ಶ್ರೀ ಕೆ. ಪ್ರಭಾಕರ್ (ವಾರ್ತಾರು).—ಅಧ್ಯಕ್ಷರೇ ಕೆಲವಾರು ನಿಮಿಷಗಳಿಂದ ಈ ಸಭೆಯಲ್ಲಿ ನಡೆದಂಥ ವಿಚಾರವನ್ನು ಬಹು ಕುತೂಹಲದಿಂದ ಕೇಳುತ್ತಿದ್ದೆ. ಇದರಲ್ಲಿ ಬಹು ಸ್ವಾರಸ್ಯವಾದ ಮೂರು ನಾಲ್ಕು ಅಂಶಗಳಿವೆ. ಪ್ರಕೃತ ಅಸ್ಪೃಶ್ಯತೆಯ ನಿವಾರಣೆ ಕಾನೂನಿಗೆ ವಿರೋಧವಾಗಿ ಪೂರಿ ಜಗದ್ಗುರುಗಳು ಆಡಿರತಕ್ಕ ಮಾತುಗಳು ರಾಷ್ಟ್ರಘಾತುಕವಾಗುತ್ತದೆ, ರಾಷ್ಟ್ರದ ಹಾಡಿಗೆ ಕೂಡ ಅಪಚಾರವಾಗುವ ರೀತಿಯಲ್ಲಿ ಮಾತನಾಡಿದ್ದಾರೆ ಎನ್ನುವ ವಿಚಾರವನ್ನು ಸಭೆಯ ಮುಂದೆ ಇಟ್ಟಿದ್ದಾರೆ. ಈ ವಿಚಾರವನ್ನು ಹೆಚ್ಚು ವಿಭಜನೆ ಮಾಡುತ್ತ ಹೋಗುವುದು ಅನುಚಿತ. ಅಸ್ಪೃಶ್ಯತಾ ಕಾನೂನು, ಗುರುಗಳಾಗಲೀ, ದೊಡ್ಡವರಾಗಲೀ, ಚಿಕ್ಕವರಾಗಲೀ, ಕಾನೂನು ಇರುವ ರೀತಿಯಲ್ಲಿ ಅನ್ವಯವಾಗಬೇಕು. ಅದನ್ನು ಅನ್ವಯ ಮಾಡುವ ದೃಷ್ಟಿ ಕೇಂದ್ರ ಸರ್ಕಾರಕ್ಕೆ ಇದ್ದರೆ ಕೇಂದ್ರ ಸರ್ಕಾರದವರು ಅದನ್ನು ಅವರಮೇಲೆ ಜಾರಿ ಮಾಡಬೇಕು ಎಂದು ಉದ್ವೇಗದಿಂದ, ಉದ್ರೇಕದಿಂದ ಹೇಳಿದ್ದಾರೆ. ಇದರಲ್ಲಿ ಹಿಂದೂ ಧರ್ಮ ಎಂದು ಮಾತನಾಡುವವರೆಲ್ಲರೂ ಕೂಡ ಅಷ್ಟು ಪ್ರವೀಣರಲ್ಲ ಎಂದು ಹೇಳಬಹುದು. ನಾನೂ ಪ್ರವೀಣನಲ್ಲ ಎಂದು ಹೇಳುತ್ತೇನೆ. ಹಿಂದೂ ಧರ್ಮ ಎನ್ನುವುದು ಜಗತ್ತಿನಲ್ಲಿ ಇದೆಯೇ ಇಲ್ಲವೇ ಎನ್ನುವ ವಿಷಯವನ್ನು ತೆಗೆದುಕೊಂಡರೆ ಇದೆಲ್ಲವೂ ಒಂದು ಮನೋವೃತ್ತಿ ಎಂದು ಹೇಳುತ್ತೇನೆ. ನಾನು ತಿಳಿದಷ್ಟಿಗೆ ಮಹಾತ್ಮ ಗಾಂಧಿಯವರು, ರಾಮಕೃಷ್ಣ ಪರಮಹಂಸರು ಇವರೆಲ್ಲ ಅಸ್ಪೃಶ್ಯತೆಗೆ ಆಧಾರವಿಲ್ಲ ಎನ್ನುವ ನಂಬಿಕೆಯನ್ನು ನಮಗೆ ಕೊಟ್ಟಿರುತ್ತಾರೆ. ಗಾಂಧೀಜಿಯವರ ಹೆಸರನ್ನು ಉಪಯೋಗಿಸಿಕೊಂಡು, ಭಕ್ತಿ ಭಾಂಡಾರಿ ಬನವಣ್ಣನವರ ಹೆಸರನ್ನು ಉಪಯೋಗಿಸಿಕೊಂಡು ಹಿಂದೂ ಧರ್ಮದಲ್ಲಿರುವ ಕಳಂಕವನ್ನು ತೊಡೆದುಹಾಕಿದರೆ ಮಾತ್ರ ಭಾರತ ದೇಶ ರಾಷ್ಟ್ರವಾಗಿ ಉಳಿದೀತು. ಈ ಭಾವನೆ ನಮ್ಮ ರಾಷ್ಟ್ರದಲ್ಲಿ ಮುಗ್ಗಟ್ಟು ತರಬಹುದೇ ವಿನಾ ಇನ್ನೇನೂ ಇಲ್ಲ. ಈ ಕೆಲಸವನ್ನು ಯಾರೇ ಮಾಡಲೀ ಅವರು ಶಿಕ್ಷೆಗೆ ಅರ್ಹರೆಂಬುದು ನಿರ್ವಿವಾದವಾದ ವಿಚಾರ. ಈ ವಿಚಾರದಲ್ಲಿ ಶ್ರೀ ಕೃಷ್ಣ ಕೂಡ ಹೇಳಿದ್ದಾನೆ. "ಚಾತುರ್ವರ್ಣಂ ಮಯಾಸೃಷ್ಟಂ" ಎಂದು ಹೇಳಿದ್ದಾನೆ. ಗುಣವನ್ನು ಬಿಟ್ಟು ಜಾತಿಯನ್ನು ಹಿಡಿದುಕೊಂಡರು ಎಂಬ ಶಂಕೆ ಬರುತ್ತಿದೆ. ನಮ್ಮ ನ್ಯಾಷನರ್ ಆಂಥಂ, ರಾಷ್ಟ್ರಧ್ವಜ ಮತ್ತು ರಾಜ್ಯಾಂಗ ಇವು ಮೂರು ಬಹಳ ಪವಿತ್ರವಾದವು. ಇವನ್ನು ಅಲ್ಲಗಳೆಯುವವರ ಮೇಲೆ ಭಾರತ ಸರಕಾರ ನಿಗಾ ಇಡಬೇಕೆಂದು ನಮ್ಮ ಮಿತ್ರರು ಹೇಳಿರುವುದನ್ನು

(ಶ್ರೀ ಕೆ. ಪ್ರಭಾಕರ್)

ಒಪ್ಪಬೇಕು. ಅವರನ್ನು ಅರೆಸ್ಟ್ ಮಾಡುವುದಕ್ಕಾಗುವುದಿಲ್ಲ, ಕಾನೂನು ಪ್ರಕಾರ ಸಭೆ ಮುಂದೆ ಕರೆತರುವುದಕ್ಕೆ ಅಧಿಕಾರ ಇಲ್ಲ ಎಂದು ಹೇಳಿದರು. ತಮ್ಮ ಮೂಲು, ನಮ್ಮ ಸರಕಾರದ ಮೂಲಕ ಕೇಂದ್ರ ಸರಕಾರಕ್ಕೆ ಒಂದು ಸೂಚನೆ ಮಾಡುತ್ತಿದ್ದೇನೆ. ರಾಜ್ಯಾಂಗದ ರೀತ್ಯ ಹೀಗೆ ಮಾಡ ಬಾರದು. ಒಂದಾನೊಂದು ಕಾಲದಲ್ಲಿ ಅಸ್ಪೃಶ್ಯತೆಯನ್ನು ಒಪ್ಪಿದ್ದೆವು, ಸ್ವಾಮಿಗಳು, ಮಠಾಧಿಪತಿಗಳು ಧರ್ಮದ ಹೆಸರಿನಲ್ಲಿ ಏನಾದರೂ ಹೇಳಿದರು ಜನರು ಒಪ್ಪುತ್ತಿದ್ದರು. ಆದರೆ ಈ ದಿವಸ ಅಸ್ಪೃಶ್ಯತೆ ಒಂದು ಕಳಂಕ, ರಾಷ್ಟ್ರಘಾತಕ ಕಾರ್ಯ ಎಂಬ ಭಾವನೆ ಇದೆ. ಇದು ನಂತೋಷದಿಂದ ಒಪ್ಪುವ ವಿಚಾರ. ಇಂಥ ಪ್ರಸಂಗ ನಡೆಯಬಾರದು ಇಂಥ ಅವ್ಯವಸ್ಥೆಗೆ ಕಾರಣವಾಗಬಾರದು ಎಂದು ಎಚ್ಚರಿಕೆ ವಹಿಸಬೇಕು, ಕೇಂದ್ರ ಸರಕಾರಕ್ಕೆ ನಮ್ಮ ಸರಕಾರ ತಿಳಿಸಬೇಕು, ಮುಂದೆ ಹೀಗಾದರೆ ಯುವಕರು, ಭಾರತವನ್ನು ನಿರ್ಮಾಣ ಮಾಡುವವರು ಶಾಸ್ತ್ರ ಮತ್ತು ಶಾಸ್ತ್ರಿಗಳನ್ನು ನಂಬುವುದಿಲ್ಲ ಎಂದು ಕೇಂದ್ರ ಸರಕಾರಕ್ಕೆ ನಮ್ಮ ಸರಕಾರ ತಿಳಿಸಬೇಕು ಎಂದು ಮತ್ತೊಂದು ಬಾರಿ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎ. ಮುನಿಯಪ್ಪ (ಬಾಗೇಪಲ್ಲಿ).—ಸ್ವಾಮಿ, ಅಸ್ಪೃಶ್ಯತೆಯ ವಿಚಾರದಲ್ಲಿ ಶ್ರೀಮಾನ್ ಶಂಕರಾಚಾರ್ಯರು ಆಡಿರುವ ಮಾತನ್ನು ನೋಡಿದರೆ ಖಂಡಿತವಾಗಿಯೂ 12 ಕೋಟಿ ಜನರೇನಿದ್ದಾರೆ ಅವರಿಂದ ಕ್ರಾಂತಿಯಾಗಬಹುದು, ಮತ್ತೆ ಹಿಂದುಗಳು ಹರಿಜನರಿಗೆ ವೈಷಮ್ಯವುಂಟಾಗಿ ಹಿಂದುಗಳು ನಾಯಬೇಕು, ಇಲ್ಲದಿದ್ದರೆ ನಾವು ನಾಯಬೇಕು ಎಂಬ ಪರಿಸ್ಥಿತಿ ಬರಬಹುದು. ಹೀಗಾಗಲು ಅವರು ಪ್ರಚೋದನೆ ಮಾಡುತ್ತಿದ್ದಾರೆ. ರಾಜ್ಯಾಂಗದ 17ನೆಯ ಆರ್ಟಿಕಲ್ ಪ್ರಕಾರ ಅಸ್ಪೃಶ್ಯರನ್ನು ಯಾರು ಅವಮಾನ ಮಾಡುವರೋ ಅವರಮೇಲೆ ಕ್ರಮ ತೆಗೆದುಕೊಳ್ಳಬೇಕು. ಹಾಗಿರುವಾಗ ಈ 17ನೆಯ ಆರ್ಟಿಕಲ್ ಪ್ರಕಾರ ಅವರ ಮೇಲೆಕೆ ಕ್ರಮ ತೆಗೆದುಕೊಳ್ಳಬಾರದು ? ಎರಡನೆಯದಾಗಿ ಇದು ನಮ್ಮ ಸರಕಾರಕ್ಕೆ ಸಂಬಂಧಪಟ್ಟಿದ್ದಲ್ಲ, ಕೇಂದ್ರ ಸರಕಾರಕ್ಕೆ ಸಂಬಂಧಪಟ್ಟಿದೆ ಎಂದು ಹೇಳುತ್ತಾರೆ. ಕೇರಳ, ಮದ್ರಾಸು, ಆಂಧ್ರ ಮುಂತಾದ ಕಡೆಗಳಲ್ಲಿ ಸಾಂಕ್ರಾಮಿಕ ರೋಗ ಬಂದರೆ ಇಲ್ಲೂ ಕೂಡ ಮುಂಜಾಗ್ರತೆ ಕ್ರಮ ತೆಗೆದುಕೊಳ್ಳುವಹಾಗೆ ನಮ್ಮ ಸರಕಾರ ಮುಂಜಾಗ್ರತೆ ಕ್ರಮ ತೆಗೆದುಕೊಳ್ಳಬೇಕು. ಇನ್ನೊಂದು ನಾವು 12 ಕೋಟಿ ಮಂದಿ ಅಸ್ಪೃಶ್ಯರಲ್ಲ, ಅಸ್ಪೃಶ್ಯತೆ ಮುಂದುವರಿಯಬೇಕೆಂದು ಹೇಳಿರುವವನು ಹೊರೆಮಾದಿಗ. ಈ ವಿಚಾರದಲ್ಲಿ ಹೋರಾಟ ಮಾಡಬೇಕು. ಮಹಾತ್ಮ ಗಾಂಧಿ, ಶಂಕರಾಚಾರ್ಯರು, ರಾಮಾನುಜಾಚಾರ್ಯರು, ಬಸವಣ್ಣನವರು ಮುಂತಾದವರೆಲ್ಲರೂ ಅಸ್ಪೃಶ್ಯತೆಯನ್ನು ನಿರ್ಮೂಲಮಾಡಬೇಕೆಂದು ಕಷ್ಟಪಟ್ಟಿರುವಾಗ ಈ ಹೊರೆಮಾದಿಗ ಅಸ್ಪೃಶ್ಯತೆಯನ್ನು ಮುಂದುವರಿಸಬೇಕೆಂದು ಹೇಳುವುದು ಸರಿಯಲ್ಲ, ನಮ್ಮ ಸರಕಾರ ಮುಂಜಾಗರೂಕತೆ ಕ್ರಮ ತೆಗೆದುಕೊಂಡು ಏನೂ ಮಾಡದಿದ್ದರೆ ಇದರ ಪರಿಣಾಮವಾಗಿ ಮುಂದೆ ಹರಿಜನರ ಕ್ರಾಂತಿ ಯಾದೀತು. ಆದುದರಿಂದ ನಮ್ಮ ಸರಕಾರ ಈ ವಿಚಾರದಲ್ಲಿ ಬಹಳ ಎಚ್ಚರಿಕೆ ವಹಿಸಬೇಕು. ನಾವಲ್ಲ ಅಸ್ಪೃಶ್ಯರು, ಅಸ್ಪೃಶ್ಯತೆ ಮುಂದುವರಿಸಬೇಕೆಂದು ಹೇಳಿರುವವನು ಹೊರೆಮಾದಿಗ. ಯೋಗಿ ವೇಮನರವರು ಈ ವಿಚಾರದಲ್ಲಿ ಒಂದು ಶ್ಲೋಕ ತೆಲುಗಿನಲ್ಲಿ ಹೇಳಿದ್ದಾರೆ. ಪೂಜೆ ಮಾಡಿಸಿಕೊಳ್ಳಬೇಕಾದ ಪೂರಿ ಜಗದ್ಗುರು ಪೂರಿ ಮಾದಿಗನಂತೆ ಹೀಗೆ ಹೇಳಿರುವಾಗ ಆತನನ್ನು ಈ ದೇಶಕ್ಕೆ ಬರದಂತೆ ಮಾಡಬೇಕು. ಬೇರೆ ಮಠಾಧೀಶ್ವರರೂ ಹೀಗೆಯೇ ಮಾಡಿದರೆ ಮುಂದೆ ಬಾರ್ಡರನ್ನು ಕಾಯುವ ಮಿಲಿಟರಿ ಬಂದು ಕ್ರಾಂತಿ ಮಾಡಲು ಅವಕಾಶವಾಗಬಹುದು. ಆದುದರಿಂದ ಸರಕಾರದವರು ಬಹಳ ಎಚ್ಚರಿಕೆಯಿಂದ ಸೂಕ್ತ ಕ್ರಮ ಕೈಕೊಳ್ಳಬೇಕೆಂದು ಹೇಳುತ್ತೇನೆ.

Sri B. L. NARAYANASWAMY (Srinivasapur).—I creave your indulgence. I want to say a few words. Please give me five minutes.

ಅಧ್ಯಕ್ಷರು.—ನಾನು ಈ ಕ್ವೆಶ್ಚನ್ ರೈಸ್ ಮಾಡುವುದಕ್ಕೆ ಅವಕಾಶ ಕೊಟ್ಟಿಲ್ಲ. ನಿಲುವಳಿ ಸೂಚನೆಗೆ ಸಮ್ಮತಿ ಕೊಡಬೇಕೆಂದು ಕೇಳಿದರು. ಈ ದಿವಸ ಕೊಡುವುದಿಲ್ಲ ಎಂದು ಹೇಳಿದಾಗ ಮತ್ತೆ ಪರಿಶೀಲಿಸಬೇಕೆಂದು ಹೇಳಿದರು. ಚರ್ಚೆಗೆ ಅವಕಾಶ ಕೊಟ್ಟಿಲ್ಲ, ಅವಕಾಶ ಕೊಡುವ ವಿಚಾರ ಪಾರ್ಲಮೆಂಟರಿ ಅಫೇರ್ಸ್ ಸಚಿವರು ಹೇಳಬೇಕು. ಅವರು ಅವಕಾಶ ಕೊಡಬಹುದೆಂದರೆ ಆಮೇಲೆ ಬೇಕಾದರೆ ಚರ್ಚೆಮಾಡಬಹುದು, ಈಗ ಚರ್ಚೆಗೆ ಅವಕಾಶವಿಲ್ಲ. I am asking the Hon. Minister to speak on this.

Sri B. L. NARAYANASWAMY.—I must be heard and you should not expect us to pocket everything that is said here. I must be permitted to express a few words on the point.

ಅಧ್ಯಕ್ಷರು.—ಈಗ ಅವಕಾಶ ಕೊಡುವುದಕ್ಕಾಗುವುದಿಲ್ಲ.

Sri B. L. NARAYANASWAMY.—This is discrimination. When you have allowed so many people, I must be given an opportunity.

Mr. SPEAKER.—I adjourn the House for half-an-hour. So that tempers may cool down.

———

The House adjourned at Fifty Minutes past Three of the Clock and re-assembled at Twenty Minutes past Four of the Clock.

———

[MR. DEPUTY SPEAKER in the Chair]

(Sri B. L. Narayana swamy stood up to speak)

ಉಪಾಧ್ಯಕ್ಷರು.—ಶ್ರೀಮಾನ್ ನಾರಾಯಣಸ್ವಾಮಿಯವರೇ ಈ ವಿಷಯ ಸುಮಾರು ಒಂದು ಗಂಟೆ ಚರ್ಚೆಯಾಗಿದೆ, ಸರ್ಕಾರದ ಪ್ರತಿಕ್ರಿಯೆ ಎನೆಂಬುದರ ಬಗ್ಗೆ ಮಾನ್ಯ ಮಂತ್ರಿಗಳು ಹೇಳುತ್ತಾರೆ. ದಯವಿಟ್ಟು ಅದನ್ನು ಕೇಳಬೇಕು.

ಶ್ರೀ ಬಿ. ಎಲ್. ನಾರಾಯಣಸ್ವಾಮಿ.—ಅನೇಕ ಸದಸ್ಯರು ಮಾತನಾಡಿದ್ದಾರೆ ನಾನೂ ಕೂಡ ನನ್ನ ಅಭಿಪ್ರಾಯವನ್ನು ಹೇಳಲೇಬೇಕಾಗಿದೆ.

ಉಪಾಧ್ಯಕ್ಷರು.—ಎರಡೇ ನಿಮಿಷದಲ್ಲಿ ಹೇಳಿ ಮುಗಿಸಬೇಕು.

ಶ್ರೀ ಬಿ. ಎಲ್. ನಾರಾಯಣಸ್ವಾಮಿ.—ಸನ್‌ಮಾನ್ಯ ಉಪಾಧ್ಯಕ್ಷರೇ, ಇಷ್ಟು ಕಾಲವಾದರೂ ನನಗೆ ಈ ವಿಷಯದಲ್ಲಿ ಮಾತನಾಡಲು ಅವಕಾಶ ಕೊಟ್ಟದ್ದಕ್ಕಾಗಿ ಪ್ರಪ್ರಥಮವಾಗಿ ನಾನು ತಮಗೆ ವಂದಿಸುತ್ತೇನೆ. ಈ ಒಂದು ಗಹನವಾದ ವಿಚಾರ ಸೂಕ್ಷ್ಮವಾಗಿ ಇಲ್ಲಿ ಪ್ರಸ್ಥಾಪಿಸಲ್ಪಟ್ಟಿದೆ.

ಶ್ರೀ ಎಂ. ನಾಗಪ್ಪ.—ಮಾನ್ಯ ಸದಸ್ಯರು ನಿಲುವಳಿ ಸೂಚನೆಯನ್ನು ಕೊಟ್ಟಿದ್ದಾರೆ ಅದನ್ನು ಆಲೋ ಮಾಡಬಹುದೇ ಬಿಡಬಹುದೇ ಎಂಬುದು ತಮಗೆ ಬಿಟ್ಟದ್ದು. ಈಗಾಗಲೇ ಸುಮಾರು ಒಂದು ಒಂದೂವರೆ ಗಂಟೆ ಚರ್ಚೆ ಮಾಡಿದ್ದೇವೆ. ಇದರಲ್ಲಿ ಭಿನ್ನಾಭಿಪ್ರಾಯ ಸರ್ಕಾರದವರಿಗೂ ಇಲ್ಲ, ನಮಗೂ ಇಲ್ಲ. ಇದು ಇವತ್ತು ನಮ್ಮ ಜ್ಯೂರಿಸ್‌ಡಿಕ್ಷನ್‌ಗೆ ಒಳಪಡುತ್ತದೆಯೇ ಇಲ್ಲವೇ ಎಂಬ ಪ್ರಶ್ನೆ ಮುಂದೆ ಬರಬಹುದು. ಆದ್ದರಿಂದ ಮಾನ್ಯ ಮಂತ್ರಿಗಳು ನಮ್ಮ ಮುಂದೆ ಒಂದು ರೆಸಲ್ಯೂಷನ್ ಅಥವಾ ಮೋಷನ್‌ನ್ನು ತಂದು ಈ ಸಭೆಯ ಸೆಂಟಿಮೆಂಟ್ ಏನಿದೆ, ದೇಶದ ಸೆಂಟಿಮೆಂಟ್ ಏನಿದೆ ಎಂಬುದನ್ನು ತಿಳಿದುಕೊಂಡು ಅದನ್ನು ಮೋಷನ್ ಮೂಲಕ ಪಾಸ್ ಮಾಡಿ ಕೆಂದ್ರ ಸರ್ಕಾರಕ್ಕೆ ಕಳುಹಿಸಿ ಕೊಟ್ಟರೆ ಒಳ್ಳೆಯದು. ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂಬ ಒಂದು ಒತ್ತಾಯವನ್ನು ಮಾಡಬಹುದು. ಮಾನ್ಯ ಸದಸ್ಯರು ಮಾತನಾಡಿದನಂತರ ಒಂದು ಮೋಷನ್ ಇಟ್ಟು ಚರ್ಚೆಯಾದ ನಂತರ ಅದನ್ನು ಪಾಸ್ ಮಾಡಿದರೆ ಯಾವ ಒಂದು ಉದ್ದೇಶದಿಂದ ಈ ಸಮಯವನ್ನು ಉಪಯೋಗಿಸಿದ್ದೇವೆಯೋ ಅದನ್ನು ಒಂದು ಒಳ್ಳೆಯ ಕೆಲಸಕ್ಕೆ ಮಾಡಿದ ಹಾಗಾಗುತ್ತದೆ ಎಂದು ನಾನು ಭಾವಿಸುತ್ತೇನೆ.

† ಶ್ರೀ ಬಿ. ಎಲ್. ನಾರಾಯಣಸ್ವಾಮಿ.—ಸ್ವಾಮಿ, ಭಾರತದೇಶದಲ್ಲಿರತಕ್ಕಂಥ ಶಂಕರಾಚಾರ್ಯರ ಮಠಗಳಿಗೆಲ್ಲಾ ಮೂಲ ಸ್ಥಾನ ಮತ್ತು ಆದಿ ಮಠ ಇರುವುದು ಶೃಂಗೇರಿಯಲ್ಲಿ, ಅದು ನಮ್ಮ ಕರ್ನಾಟಕದಲ್ಲಿರುವುದು ಒಂದು ಬಹಳ ಹೆಮ್ಮೆಯ ವಿಷಯವಾಗಿದೆ. ಇದಕ್ಕೆ ಮೂಲ ಜಗದ್ಗುರುಗಳು ಆದಿ ಶಂಕರಾಚಾರ್ಯರು. ಅವರು ಸನಾತನ ಧರ್ಮ ಪ್ರತಿಷ್ಠಾಪನಾಚಾರ್ಯರು. ಹಿಂದೂ ಧರ್ಮದಲ್ಲಿ ಯಾವ ರೀತಿಯಾಗಿ ನಡೆದುಕೊಳ್ಳಬೇಕು, ನಮ್ಮ ಧರ್ಮ ನೀತಿ ಏನೆಂಬುದನ್ನು ಹೇಳುತ್ತಾ ಹಿಂದೂಧರ್ಮ ಬಹಳ ವಿಶಾಲಭಾವನೆಯಿಂದ ಕೂಡಿದೆ ಎಂದು ಹೇಳಿ ಅನೇಕ ವಿತೋಪದೇಶಗಳನ್ನು ಅವರು ದೇಶದಲ್ಲಿ ಮಾಡಿದ್ದಾರೆ. ಸನಾಜದಲ್ಲಿರತಕ್ಕ ಅಸ್‌ಪೃಶ್ಯರಾಗಲಿ, ಬ್ರಾಹ್ಮಣ

(ಶ್ರೀ ಬಿ. ಎಲ್. ನಾರಾಯಣಸ್ವಾಮಿ)

ರಾಗಲಿ, ಇತರ ಜಾತಿಗಳವರಾಗಲಿ ಎಲ್ಲರೂ ಹಿಂದೂಗಳೇ ಎಂದು ಸಾರಿ ಹೇಳಿದ್ದಾರೆ. ಅನೇಕ ಸಂದರ್ಭಗಳಲ್ಲಿ ಕೆಲವು ಪಂಗಡದ ಜನರನ್ನು ಹೊರೆಯ ಎಂಬ ಭಾವನೆಯಿಂದ ಏನು ಕರೆಯುತ್ತೇವೆ ಅವನ ಕರ್ಮದಿಂದ ಅವನನ್ನು ಹೊರೆಯ ಅಂತ ಕರೆಯುವುದು ಏನಿದೆ ಅದು ತಪ್ಪು, ಅವನಲ್ಲಿ ಬ್ರಾಹ್ಮಣನಲ್ಲಿರಬೇಕಾದಂತಹ ಒಂದು ಬ್ರಹ್ಮ ಜ್ಞಾನ ಏನುಂಟೋ ಅದು ಇದ್ದ ಪಕ್ಷದಲ್ಲಿ ಅವನು ನಿಜವಾದ ಬ್ರಾಹ್ಮಣ ಅಂತ ಹೇಳಿ ಹೇಳಿದ್ದಾರೆ. ಇದು ನಿಜವಾಗಿಯೂ ಚರಿತ್ರಾರ್ಹವಾಗಿದೆ. ಮೂಲ ಗುರುಗಳ ಉಪದೇಶ ಈ ರೀತಿಯಾಗಿ ಇರುವಾಗ ಅವರ ಮತದ ಒಂದು ವಿಭಾಗಕ್ಕೆ ಸೇರಿದ ಪೂರಿ ಜಗದ್ಗುರುಗಳು ಏನೋ ಒಂದು ರೀತಿಯಾಲ್ಲಿ ವಿನ್ಯಾಭಿಪ್ರಾಯಪಟ್ಟರು ಅಂತ ಹೇಳಿ ಅದಕ್ಕೆ ಪ್ರಾಶಸ್ತ್ಯ ಕೊಡುತ್ತಾ ಇರುವುದು ಖಂಡಿತವಾಗಿಯೂ ಸರಿಯಾದ್ದಲ್ಲ. ಭಾರತ ದೇಶದಲ್ಲಿ ಈ ಪೂರಿ ಜಗದ್ಗುರುಗಳು ಹೇಳಿರತಕ್ಕ ಮಾತು ಯಾರೂ ಮೆಚ್ಚತಕ್ಕದ್ದಲ್ಲ, ಖಂಡನಾರ್ಹವಾದದ್ದು. ಅವರು ಮಾಡಿದಂತಹ ಒಂದು ಹೇಳಿಕೆ ತಪ್ಪು ಎಂದು ಹೇಳುತ್ತೇನೆ. ಆ ತಪ್ಪನ್ನು ಬಯಲಿಗೆ ಎಳೆಯುತ್ತಾ ಮಾನ್ಯ ಸದಸ್ಯರು ಮಾತನಾಡತಕ್ಕ ಧಾಟಿಯಲ್ಲಿ ಹಿಂದೂ ಧರ್ಮ, ಬ್ರಾಹ್ಮಣಿಕೆ ಎಲ್ಲವನ್ನೂ ಕೂಡ ಅಲ್ಲಗಳೆದು ಮಾತನಾಡಿದ್ದು ಬಹಳ ಶೋಚನೀಯವಾದ ವಿಚಾರ. ಹಿಂದೂಗಳೆಲ್ಲರೂ ಹಿಂದೂಧರ್ಮಕ್ಕೆ ಸೇರಿದವರು ಎಂಬ ವಿಶಾಲ ಭಾವನೆ ಇದೆ. ಯಾವ ಜಾತಿಗೆ ಸೇರಿದವರಾಗಲಿ, ಹರಿಜನರಾಗಲಿ, ಅಸ್ಪೃಶ್ಯರಾಗಲಿ ಅವರನ್ನು ಕೀಳು ಭಾವನೆಯಿಂದ ಕಾಣಬೇಕೆಂದು ಯಾರು ಹೇಳಿಲ್ಲ, ಸಾರಿಲ್ಲ. ಮನುಧರ್ಮ ಶಾಸ್ತ್ರವನ್ನೂ ಕೂಡ ಕೆಲವರು ಪ್ರಸ್ತಾಪಮಾಡಿದ್ದಾರೆ. ಮನು ಆಗಿನ ಕಾಲದಲ್ಲಿ ಇದ್ದಂತ ಪರಿಸ್ಥಿತಿಯನ್ನು ಅನುಸರಿಸಿ ಕರ್ಮ ವಿಭಾಗವನ್ನು ಮಾಡಿದ್ದಾನೆಯೇ ಹೊರತು ಹಿಂದೂ ಜನಾಂಗದಲ್ಲಿ ಜಾತೀಯತೆಯ ಪದ್ಧತಿಯನ್ನು ಉಂಟುಮಾಡಲಿಲ್ಲ; ಇದಕ್ಕೆ ಸರಿಯಾದ ಅರ್ಥವನ್ನು ಮಾಡಿಕೊಳ್ಳಬೇಕು. ಸರಿಯಾಗಿ ಅರ್ಥಮಾಡಿಕೊಳ್ಳದೆ ಒಟ್ಟಿನಲ್ಲಿ ಹಿಂದೂ ಧರ್ಮವೇ ಕೆಟ್ಟದ್ದು ಎಂಬ ಅಭಿಪ್ರಾಯವನ್ನು ಯಾರು ಹಿಂದೂಗಳು ಎಂದು ಅನಿಸಿಕೊಂಡಿದ್ದೇವೆಯೋ ಅವರೇ ಹೇಳುವುದು ನಿಜವಾಗಿಯೂ ಕೂಡ ಅಕ್ಷಮ್ಯವಾದದ್ದು. ಆ ರೀತಿ ಯಾರೂ ಹೇಳಬಾರದು, ಹಿಂದೂ ಧರ್ಮದಲ್ಲಿ ಸರ್ವ ಜನಾಂಗಗಳನ್ನೂ ಒಂದೇ ರೀತಿಯಾಗಿ ಕಾಣಬೇಕೆಂದು ಹೇಳಿದ್ದಾರೆ, ಅಷ್ಟೇ ಅಲ್ಲ ಪರಧರ್ಮ ಸಹಿಷ್ಣುತೆ, ಅನ್ಯ ಧರ್ಮದವರನ್ನೂ ಕೂಡ ನಮಗೆ ಸರಿಸಮಾನರಾದ ಮಾನವರಂತೆ ಕಾಣಬೇಕೆಂದು ಹಿಂದೂ ಧರ್ಮ ಸಾರಿದೆ. ಹಿಂದೂ ಧರ್ಮ ಸಂಕುಚಿತ ಮನೋಭಾವವನ್ನು ಇಟ್ಟುಕೊಂಡಿಲ್ಲ. ಯಾವನೋ ಒಬ್ಬ ಜಗದ್ಗುರು ಅಂತಹ ಒಂದು ಸಂಕುಚಿತ ಮನೋಭಾವವನ್ನು ಉಂಟುಮಾಡತಕ್ಕ ಅವಿವೇಕತನಕ್ಕೆ, ಮೂರ್ಖತನಕ್ಕೆ ಹೋದನೆಂಬ ಮಾತ್ರಕ್ಕೆ ಹಿಂದೂ ಧರ್ಮವನ್ನೇ ಅಲ್ಲಗಳೆಯುವುದು ಸರ್ವಥಾ ಸರಿಯಲ್ಲ ಆ ರೀತಿ ಮಾಡಬಾರದು ಎಂದು ಹೇಳುತ್ತೇನೆ.

ಶ್ರೀ ಎ. ಮುನಿಯಪ್ಪ. —ಯಾವ ಸ್ವಾಮಿಗಳು ಹೇಳಿದರೋ ಅವರನ್ನು ನಾವು ಖಂಡನೆ ಮಾಡುತ್ತೇವೆ.

ಶ್ರೀ ಬಿ. ಎಲ್. ನಾರಾಯಣಸ್ವಾಮಿ.—ಅವರು ಅಕ್ಷಮ್ಯ ಅಪರಾಧ ಮಾಡಿದರು ಅಂತ ಅವರ ಅಪರಾಧಕ್ಕೆ ಹಿಂದೂ ಧರ್ಮವನ್ನು ಅಲ್ಲಗಳೆಯುವುದು ಧರ್ಮವಲ್ಲ ಎಂದು ಹೇಳುತ್ತಾ ಇದ್ದೇನೆ. ಇನ್ನೊಬ್ಬ ಮಾನ್ಯ ಸದಸ್ಯರು ನಾವೆಲ್ಲ ಇಂತಹ ಜಗದ್ಗುರುಗಳಿಗೆ ನಮಸ್ಕಾರ ಮಾಡುತ್ತೇವೆ ಎಂದು ಹೇಳಿದರು. ನಿಜವಾಗಿಯೂ ಪ್ರತಿಯೊಂದು ಕೋಮಿನವರಿಗೂ ಹಿಂದೂಗಳಾಗಲಿ, ಕ್ರೈಸ್ತಿಯನ್ನರಾಗಲಿ, ಬೌದ್ಧರಾಗಲಿ, ಮುಸ್ಲಿಂರಾಗಲಿ ಎಲ್ಲರಿಗೂ ಗುರುಗಳು ಉಂಟು, ಗುರು ಸ್ಥಾನ ಉಂಟು, ಗುರು ಮಂದಿರಗಳು ಉಂಟು, ಅವರ ಅನುಯಾಯಿಗಳಿಗೆ ಅವರು ಸಿದ್ಧೋಪದೇಶ ಮಾಡುವುದು ಅವರ ಕರ್ತವ್ಯ, ಅವರನ್ನು ಗೌರವಿಸುವುದು ನಮ್ಮ ಕರ್ತವ್ಯ, ಅಂತಹ ಗುರುಗಳಿಗೆ ನಮಸ್ಕಾರ ಮಾಡುವುದು ತಪ್ಪು ಅಂತ ಹೇಳುವುದು ಉಚಿತವಾದದ್ದಲ್ಲ. ಒಬ್ಬ ಗುರು ತಪ್ಪು ಮಾಡಿದ ಅಂತ ಹೇಳಿ ಎಲ್ಲ ಗುರುಗಳನ್ನು ಅಲ್ಲಗಳೆಯುವುದು ಸರಿಯಿದ್ದಲ್ಲ ಎಂದು ಅವರಲ್ಲಿ ಅರಿಕೆ ಮಾಡುತ್ತೇನೆ.

ಶ್ರೀ ಎ. ಮುನಿಯಪ್ಪ.—ನಾವೂ ಸಹ ವಿವರಣೆ ಕೊಡಬೇಕಾಗುತ್ತದೆ. ಒಬ್ಬ ಮಠಾಧೀಶರು ಯಾರು ತಪ್ಪು ಮಾಡಿದ್ದಾರೋ ಅವರನ್ನು ನಾವು ಅಂದಿದ್ದೇವೆಯೇ ಹೊರತು ಬೇರೆಯವರನ್ನು ಅಂದಿಲ್ಲ.

ಶ್ರೀ ಬಿ. ಎಲ್. ನಾರಾಯಣಸ್ವಾಮಿ.—ಒಬ್ಬರು ತಪ್ಪು ಮಾಡಿದರು ಅಂತ ಹೇಳಿ ಹಿಂದೂ ಜನಾಂಗವನ್ನೇ ಅಲ್ಲಗಳೆಯುವುದು ಸರಿಯಲ್ಲ ಎಂದು ಹೇಳುತ್ತಾ ಇದ್ದೇನೆ.

ಉಪಾಧ್ಯಕ್ಷರು.—ಮಾನ್ಯ ಸದಸ್ಯರು ಹೇಳಿದ ವಿಷಯದ ಮೇಲೆ ಸದಸ್ಯರ ಕಾಮೆಂಟು ಬೇಡ. ಈಗಾಗಲೇ ಒಂದು ಗಂಟೆ ಕಾಲ ಚರ್ಚೆಯಾಗಿದೆ ತಮ್ಮ ಭಾಷಣ ಆದಮೇಲೆ ಮಾನ್ಯ ಮಂತ್ರಿಗಳು ಸರ್ಕಾರದ ಪ್ರತಿಕ್ರಿಯೆ ಹೇಳುತ್ತಾರೆ.

ಶ್ರೀ ಬಿ. ಎರ್. ನಾರಾಯಣಸ್ವಾಮಿ.—ಒಬ್ಬ ಮಾನ್ಯ ಸದಸ್ಯರು ಮಾತನಾಡುತ್ತಾ ಅನ್ಯ ಮತಕ್ಕೆ ಹೋಗುವವರಿಗೆ ಅವಕಾಶವಿರಬೇಕು, ಅಡ್ಡಿಪಡಿಸಬಾರದು ಎಂದು ಹೇಳಿದರು, ಹಿಂದೂ ಗಳಾದವರು ಯಾರೂ ಕೂಡ ಈ ಮಾತನ್ನು ಒಪ್ಪರಾರರು. ಹಿಂದೂಗಳಾದವರಿಗೆ ಪ್ರತಿಯೊಬ್ಬರಿಗೂ ಕೂಡ ತಮ್ಮ ಜನಸಂಖ್ಯೆ ಬೆಳೆಯಬೇಕು, ತಮ್ಮ ಜನರ ಅಭಿವೃದ್ಧಿಯಾಗಬೇಕು ಎಂಬ ಆಶೆ ಇದ್ದೇ ಇರುತ್ತದೆ. ಹಿಂದೂಗಳಾದವರನ್ನು ಬಲಾತ್ಕಾರವಾಗಿ ಅನ್ಯ ಮತಾವಲಂಬಿಗಳು ಮತಾಂತರ ಗೊಳಿಸುವುದನ್ನು ಖಂಡಿತವಾಗಿಯೂ ಪ್ರತಿಭಟಿಸಲೇ ಬೇಕು. ಅದಕ್ಕೆ ಅವಕಾಶ ಇರಬಾರದು. ಮತಾಂತರಗೊಳಿಸಲು ಅವಕಾಶವಿದೆ ಎಂದು ಅದನ್ನು ದುರಪಯೋಗ ಮಾಡುವುದಾದರೆ ನಿಜ ವಾಗಿಯೂ ಕೂಡ ಜಾತ್ಯಾತೀತವಾದ ಈ ರಾಷ್ಟ್ರದಲ್ಲಿ ಸರ್ಕಾರದವರು ಇದರ ನೆರವಿಗೆ ಬರಬೇಕೆಂದು ಹೇಳುತ್ತೇನೆ.

ಶ್ರೀ ಎ. ಮುನಿಯಪ್ಪ.—12 ಕೋಟಿ ಜನ ಎಷ್ಟೇ ಕಿರುಕುಳ ಕೊಟ್ಟರೂ ಕೂಡ ಸಾವಿರಾರು ವರ್ಷಗಳಿಂದ ಸಹನೆಯಿಂದ ಇದ್ದಾರೆ, ಸಹನೆಗೂ ಒಂದು ಮಿತಿ ಇದೆ, ಅವರು ಹಿಂದೂ ಧರ್ಮವನ್ನು ಬಿಟ್ಟು ಬೇರೆ ಧರ್ಮವನ್ನು ಅವಲಂಬನೆ ಮಾಡುವುದಕ್ಕೆ ಹೋಗಿಲ್ಲ. ಸವರ್ಣಿಯರಲ್ಲಿ ಅವರ ಮನಸ್ಸು ಪರಿವರ್ತನೆಯಾಗಿ, ನೀವೆಲ್ಲ ನಮ್ಮನ್ನು ಮಕ್ಕಳಂತೆ ನೋಡಿಕೊಳ್ಳಬೇಕು. ನಿಮ್ಮ ಹತ್ತಿರ ಜಗಳ ವಾಡುತ್ತೇವೆಯೇ ಹೊರತು ಮತಾಂತರ ಹೋಗಬೇಕೆಂದು ಯಾರ ಮನಸ್ಸಿನಲ್ಲಿಯೂ ಇಲ್ಲ.

4-30 P.M.

ಶ್ರೀ ಬಿ. ಎರ್. ನಾರಾಯಣಸ್ವಾಮಿ.—ನಾನು ಶ್ರೀ ಮುನಿಯಪ್ಪನವರು ಹೇಳಿದ್ದ ವಾದವನ್ನು ಅಕ್ಷರಶಃ ಒಪ್ಪುತ್ತೇನೆ. ಅವರ ಅಭಿಪ್ರಾಯಕ್ಕೂ ನನ್ನ ಅಭಿಪ್ರಾಯಕ್ಕೂ ಯಾವ ಬೇಧವೂ ಇಲ್ಲ.

† ಶ್ರೀ ಎಸ್. ಎಸ್. ಅರಕೇರಿ.—ಆ ಪೂರಿ ಜಗದ್ಗುರು ಶಂಕರಾಚಾರ್ಯರು ರಾಜ್ಯಂಗಕ್ಕೆ ಬಹಳ ಅಪಮಾನ ಮಾಡಿದ್ದಾರೆ. ಅಸ್ಪೃಶ್ಯತಾ ನಿವಾರಣಾ ಕಾನೂನಿಗೆ ವ್ಯತಿರಿಕ್ತವಾಗಿ ವರ್ತಿಸಿ ದ್ದಾರೆ. ಅವರು ಮಾಡಿರತಕ್ಕ ಆ ಹೇಸಿಕೆಯನ್ನು ಖಂಡಿತವಾಗಿಯೂ ಯಾವ ಭಾರತೀಯನೂ ಅಥವಾ ಭಾರತೀಯ ಪ್ರಜೆಯೂ ಒಪ್ಪುವುದಿಲ್ಲ. ಅಷ್ಟೇ ಅಲ್ಲ ಅದನ್ನು ಯಾರೂ ಕೂಡ ಸ್ಮೈರಿಸರು. ಆ ಶಂಕರಾಚಾರ್ಯರು ಹೇಳಿರತಕ್ಕ ಮಾತುಗಳು ಶಾಸ್ತ್ರೋಕ್ತವಾದವುಗಳಲ್ಲ ಶಾಸ್ತ್ರಸಮ್ಮತ ವಾದುವುಗಳಲ್ಲ. ಆ ಮಾತುಗಳು ಪ್ರತಿಯೊಬ್ಬ ಭಾರತೀಯನನ್ನೂ ತಲೆ ತಗ್ಗಿಸುವಂತೆ ಮಾಡುವ ವಿಷಯ ಇದು. ಅದು ಒಂದು ತುಂಬಾ ನಾಚಿಗೆಗೇಡಿನ ವಿಚಾರ. ದೇಶದಲ್ಲಿ ಅಸ್ಪೃಶ್ಯತೆಯನ್ನು ತೊಡೆದುಹಾಕತಕ್ಕ ಕಾನೂನು ಜಾರಿಯಲ್ಲಿರತಕ್ಕ ಕಾಲದಲ್ಲಿ ಅವರು ಇಂಥ ಒಂದು ಅಕ್ಷಮ್ಯ ಅಪ ರಾಧಕರವಾದ ಭಾಷಣವನ್ನು ಮಾಡಿರುವುದಕ್ಕಾಗಿ ಅವರನ್ನು ಕೂಡಲೆ ಅರೆಸ್ಟ್ ಮಾಡಿ ವಿಚಾರಣೆಗೆ ಗುರಿಪಡಿಸಬೇಕು, ಇಲ್ಲವೇ ಅವರನ್ನು ಕೂಡಲೆ ಹುಚ್ಚಾಸ್ಪತ್ರೆಗೆ ಕಳುಹಿಸಬೇಕು. ಇದು ಇಡೀ ಭಾರತದಲ್ಲಿರತಕ್ಕ 12 ಕೋಟಿಯ ಒಂದು ಜನಾಂಗಕ್ಕೆ ಸಂಬಂಧಪಟ್ಟ ಪ್ರಶ್ನೆ. ಇವರಲ್ಲಿರತಕ್ಕ ಅಸ್ಪೃಶ್ಯತೆಯನ್ನು ತೊಡೆದು ಹಾಕುವುದಕ್ಕಾಗಿ ಒಂದು ಕಾನೂನನ್ನೇ ತಂದಿದಾಗ್ಗೂ ಇದೇ ರಾಷ್ಟ್ರದಲ್ಲಿ ಆ ಅಸ್ಪೃಶ್ಯತೆ ಉಳಿಯುವುದಕ್ಕೆ ಅವಕಾಶವಿದೆ, ಅದಕ್ಕೆ ಸಾಕಷ್ಟು ಧರ್ಮದ ಹಾಗೂ ಶಾಸ್ತ್ರದ ಆಧಾರಗಳಿವೆ ಎಂದು ಅವರು ಹೇಳಿರತಕ್ಕದ್ದು ಬಹಳ ಅಪಾಯಕಾರಿ ದೇಶಕ್ಕೆ. ಮಹಾತ್ಮಗಾಂಧೀಜಿಯವರು ಸತತವಾಗಿ ಹೋರಾಟ ಮಾಡಿ ಈ 12 ಕೋಟಿ ಜನರ ಅಸ್ಪೃಶ್ಯತೆ ಯನ್ನು ನೀಗುವುದಕ್ಕೆ ಎಲ್ಲಾ ಪ್ರಯತ್ನಗಳನ್ನೂ ಮಾಡಿದ್ದಾಗ್ಗೂ ಈ ಕಾಲದಲ್ಲಿ ಅಂಥಾ ಒಂದು ಕಾನೂನು ದೇಶದಲ್ಲಿ ಜಾರಿಯಲ್ಲದ್ದಾಗ್ಗೂ ಈ 75ನೆಯ ವಯಸ್ಸಿನಲ್ಲಿ ಆ ಜಗದ್ಗುರು ಅನ್ನಿಸಿ ಕೊಳ್ಳುವುದಕ್ಕೆ ರಾಯಕ್ಕಿಲ್ಲದ ವ್ಯಕ್ತಿ ಈ ಮಾತುಗಳನ್ನು ಹೇಳಿದ್ದು ಅಜ್ಞಾನವನ್ನು ಸೂಚಿಸುತ್ತಿದೆ. ಆತ ಏನೇ ಹೇಳಲಿ ಆತ ಜಗದ್ಗುರು ಎಂದು ಅವರು ಹೇಳಿದ್ದನ್ನೆಲ್ಲಾ ನಾವು ಕೇಳಿಕೊಂಡು ಅದನ್ನು ಸ್ಮೈರಣೆ ಮಾಡಿಕೊಳ್ಳುವುದಕ್ಕೆ ನಮ್ಮಿಂದ ಸಾಧ್ಯವಿಲ್ಲ. ಆ ವ್ಯಕ್ತಿಯ ಬಗ್ಗೆ ಕೇಂದ್ರ ಸರ್ಕಾರ ಕೂಡಲೇ ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ ನ ವು ಅದನ್ನು ಸ್ಮೈರಣೆಮಾಡುವುದಕ್ಕೆ ಖಂಡಿತ ಸಾಧ್ಯವಿಲ್ಲ. ಅದರೆ ನಾವು ಯಾರೂ ಆ ಶಾಸ್ತ್ರಗಳ ಮೇಲೆ ಅಥವಾ ತತ್ವಗಳ ಮೇಲೆ ಆಕ್ಷೇಪಣೆ ಮಾಡುತ್ತಿಲ್ಲ.

"ಶೂದ್ರಾಃ ಧನಂ ಸಂಚೆಯಾತ್
ಬ್ರಾಹ್ಮಣಂ ಭಾದತೇವಾ." (ಮನುಸ್ಮೃತಿ)

(ಶ್ರೀ ಎಸ್. ಎಸ್. ಅರಕೇರಿ)

ಆ ಶಂಕರಾಚಾರ್ಯರ ತರೆಯಲ್ಲಿ ಬಹುಶಃ ಈ ಶ್ಲೋಕವಿರಬಹುದು. ಆ ಮನುಷ್ಯ ಈ 20ನೇ ಶತಮಾನದಲ್ಲಿ ಅದನ್ನು ರೂಢಿಗೆ ತರಬಾರದಾಗಿತ್ತು. ಅದನ್ನು ತ್ಯಾಜಮಾಡದೆ ಅದಕ್ಕೆ ಆತ ಅಂಟಿಕೊಂಡಿರುವುದರಿಂದ ಆತನನ್ನು ಎರ್ಲಾ ರಾಜ್ಯಗಳೂ ಸೇರಿ ಬ್ಯಾನ್‌ಮಾಡಬೇಕು ಹಾಗೂ ಆತನನ್ನು ಮೆಂಟಲ್ ಆಸ್ಪತ್ರೆಗೆ ಕೂಡಲೆ ದಾಖಲ್ಮಾಡಬೇಕು. ಈ ಅಸ್ಪೃಶ್ಯತೆಯನ್ನು ತೊಳೆಯುವುದಕ್ಕೆ ಜನ್ಮ ತಾಳಿದಾ ಬ್ರಹ್ಮನೆಂದರೆ ಆ. ಡಾ. ಅಂಬೇಡ್ಕರರು. ಈ ಪೂರಿ ಶಂಕರಾಚಾರ್ಯರು ಏನು ಹೇಳಿದ್ದಾರೆ ಅದಕ್ಕಾಗಿ ಅವರನ್ನು He must be immediately arrested under the Prevention of Social Disabilities Act for defending maintenance of untouchability and sent to the Mental Hospital.

Sri B. L. NARAYANASWAMY.—He is not only an anti-social element but also an anti-national element. ಪೂಜ್ಯ ಮಹಾತ್ಮ ಗಾಂಧೀಜಿಯವರು ಕಳೆದ 20 ವರ್ಷಗಳಲ್ಲಿ ಅಸ್ತಿಭಾರಹಾಕಿದ ಪ್ರಕಾರ ಭಾರತವನ್ನು ಒಂದು ಆ ಜಾತ್ಯಾತೀತ ರಾಷ್ಟ್ರವನ್ನಾಗಿ ಕಟ್ಟಬೇಕೆಂದು ನಡೆಸಿದ ಪ್ರಯತ್ನ ಬಹಳ ದೂರಕ್ಕೆ ಸಾಗಿ ಬಂದಿರುವಾಗ, ಈ ವಿಚಾರದಲ್ಲಿ ಅನೇಕ ರಾಜ್ಯಗಳು ಮುಂದುವರಿಯುತ್ತಿರುವ ಕಾಲದಲ್ಲಿ ಯಾರೂ ಹಿಂದೂ ಧರ್ಮಕ್ಕೆ ಕಂಳಕ ತರತಕ್ಕ ರೀತಿಯಲ್ಲಿ ವರ್ತಿಸಬಾರದು. ಅದು ಬಹಳ ಅಕ್ಷಮ್ಯವಾದದ್ದು. ಅಂಥವರನ್ನು ಆಂಟಿ ಸೋಷಿಯಲ್ ಎಲಿಮೆಂಟ್ ಎಂದು ಸಮಾಜದಿಂದ ದೂರವಾಗಿಡಬೇಕು.

ಹೀಗೇ ಅವರು ರಾಷ್ಟ್ರಗೀತೆಯ ವಿಚಾರದಲ್ಲೂ ಕ್ಯೆಹಾಕಿದ್ದಾರೆ. ಅದನ್ನೂ ಸಹಾ ಯಾರೂ ಸಹಿಸುವುದಕ್ಕಾಗುವುದಿಲ್ಲ. ಆದರೆ ಆ ರಾಷ್ಟ್ರ ಗೌರವನ್ನು ಯಾವ ರೀತಿ ನಲ್ಲಿಸಬೇಕು ಅನ್ನುವುದನ್ನು ನಮ್ಮಲ್ಲಿ ಸಾರ್ವಜನಿಕರಾಗಲಿ ಅಥವಾ ನೌಕರವರ್ಗದವರಲ್ಲಾಗಲಿ ಇನ್ನೂ ಸರಿಯಾಗಿ ತಿಳಿದುಕೊಂಡಿಲ್ಲ ಎಂಬುದನ್ನು ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ಆದರೆ ಹೀಗೆ ನಮ್ಮ ರಾಷ್ಟ್ರ ಗೀತೆ ವಿಚಾರದಲ್ಲಿ ಒಂದು ಅವಹೇಳನ ಮಾಡುವುದಕ್ಕೆ ಏನು ಒಂದು ಪ್ರಯತ್ನ ನಡೆದಿದೆ ಅದನ್ನು ಪ್ರಾರಂಭದಲ್ಲೇ ಮೊಟಕು ಮಾಡಬೇಕು. ಅದರ ಬಗ್ಗೆ ಒಂದು ವಾಖ್ಯಾನ ಮಾಡುವುದಕ್ಕೆ ಅವಕಾಶ ಕೊಡಬಾರದು. ಈ ವಿಚಾರದಲ್ಲಿ ಕೇಂದ್ರ ಸರ್ಕಾರದವರು ಕೂಡಲೆ ಸೂಕ್ತ ಕಾರ್ಯಕ್ರಮವನ್ನು ಕೈಗೊಳ್ಳದಿದ್ದರೆ ದೇಶದಲ್ಲಿ ಒಂದು ದೊಡ್ಡ ರಕ್ತದ ಕ್ರಾಂತಿಯೇಳುತ್ತದೆ. ಅದಕ್ಕೆ ಕೇಂದ್ರ ಸರ್ಕಾರದವರು ಅವಕಾಶ ಕೊಡಬಾರದು. ಇಂಥ ಅಕ್ಷಮ್ಯ ಕಾರ್ಯಕ್ಕೆ ಕ್ಯೆಹಾಕಿರತಕ್ಕ ವ್ಯಕ್ತಿ ಯಾರೇ ಆಗಲಿ ಆತ ಆಂಟಿ ಸೋಷಿಯರ್ ಎಲಿಮೆಂಟ್ ಅಷ್ಟೇ ಅಲ್ಲ, ಆತನನ್ನು ಆಂಟಿಸೋಷಿಯರ್ ಎಲಿಮೆಂಟೆಂದು ಡಿಕ್ಲೇರ್‌ಮಾಡಬೇಕೆಂದು ಹೇಳುತ್ತೇನೆ. ಇಷ್ಟು ಮಾತುಗಳನ್ನಾಡುವುದಕ್ಕೆ ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ಪುಟ್ಟಸ್ವಾಮಿ.—ಸ್ವಾಮಿ, ಈಗತಾನೆ ನಥೆಯ ಮುಂದೆ ನಡೆದಂಥ ಒಂದು ಚರ್ಚೆಗೆ ನಮ್ಮ ನಿಯಮಾವಳಿಗಳ 50 ಮತ್ತು 59ರ ಪ್ರಕಾರ ಒಂದೊಂದು ಸೂಚನೆಯನ್ನು ಮಾನ್ಯ ಸದಸ್ಯರು ಕಳುಹಿಸಿದ್ದಾರೆ. ಆ ಸೂಚನೆಗಳ ಪ್ರಕಾರ ಇದರ ಚರ್ಚೆಗೆ ಇಲ್ಲ ಅವಕಾಶ ಕೊಡಬೇಕೇ ಬೇಡವೇ ಅನ್ನುವುದನ್ನು ತೀರ್ಮಾನಮಾಡುವುದಕ್ಕೆ ಮುನ್ನವೇ ಇದರ ಬಗ್ಗೆ ಈಗಾಗಲೇ ಸಾಕಷ್ಟು ಚರ್ಚೆಯಾಗಿದೆ. ಆ ಚರ್ಚೆಯಲ್ಲಿ ಅನೇಕ ಮಾನ್ಯ ಸದಸ್ಯರು ಬಹಳ ನೊಂದ ಹೃದಯದಿಂದ ತಮ್ಮ ಹೃದಯದಲ್ಲಿದ್ದ ಭಾವನೆಗಳನ್ನು ಪ್ರಕಟಗೊಳಿಸುವಾಗ ಆ ಮಾನ್ಯ ಸದಸ್ಯರುಗಳು ಯಾವ ಭಾವನೆಗಳನ್ನು ಪ್ರಕಟಗೊಳಿಸಿದರೋ ಆ ಭಾವನೆಗೆ ನಾನು ಪ್ರತಿಧ್ವನಿಗೂಡಿಸುವುದಕ್ಕೆ ನಿಂತಿದ್ದೇನೆಂದು ಹೇಳಬಯಸುತ್ತೇನೆ. ವಿಚಾರವನ್ನು ಪ್ರಸ್ತಾಪ ಮಾಡುವ ವೇಳೆಯಲ್ಲಿ ನಾನು ಮಾತುಗಳ ಕಾಠಿಣ್ಯತೆಯನ್ನು ತಗ್ಗಿಸಿ ನಯವಾದ ಮಾತುಗಳಲ್ಲಿ ಅಭಿಪ್ರಾಯವನ್ನು ವ್ಯಕ್ತಪಡಿಸಿದರೆ ಅದಕ್ಕೆ ಮಾನ್ಯ ಸದಸ್ಯರು ಬೇರೆ ರೀತಿಯಲ್ಲಿ ಭಾವಿಸಬಾರದು. ಒಂದು ದೇಶದ ಆಡಳಿತವನ್ನು ನಡೆಸತಕ್ಕ ಕಡೆ ಆ ಆಡಳಿತ ಜವಾಬ್ದಾರಿಯನ್ನು ಹೊತ್ತಿರತಕ್ಕವರು ಮಾತನಾಡತಕ್ಕ ಕಾಲದಲ್ಲಿ ಅವರಾಡತಕ್ಕ ಮಾತುಗಳು, ಮಾಡತಕ್ಕ ಕಾರ್ಯಗಳು ಜಾರಿಗೆ ಬರುತ್ತವೆಂಬುದನ್ನು ನಾನು ಒತ್ತಿ ಹೇಳಬೇಕಾಗಿಲ್ಲ. ಈ ನಥೆಯನ್ನು ಬಿಟ್ಟು ಹೊರಗಡೆ ಆಡಿದ ಮಾತುಗಳು ಹಾಗೆ ಜಾರಿಗೆ ಬರುವುದಿಲ್ಲ. ಆದರೆ ದೇಶದಲ್ಲಿ ಅಸ್ಪೃಶ್ಯತೆಯನ್ನು ತೊಡೆದುಹಾಕಲು ಯಾವಾಗ ಒಂದು ಕಾನೂನು ಸಿದ್ಧವಾಗಿರುತ್ತದೆಯೋ ಆಗ ನಾವು ಈ ವಿಚಾರಗಳಲ್ಲಿ ಬಳಿಸತಕ್ಕ ಮಾತುಗಳು ಬಹಳ ಸಂಯಮದಿಂದ ಇರಬೇಕಾದುದು ಅಗತ್ಯ ಎಂಬ ಅಂಶವನ್ನು ನಾನು ಸಭೆಗೆ ಮೊಟ್ಟಮೊದಲನೆಯದಾಗಿ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಪ್ರಸಕ್ತ ವಿಚಾರದತ್ತ ಬಂದರೆ ಪೂರಿಯಲ್ಲಿರತಕ್ಕ ಶಂಕರಾಚಾರ್ಯಪೀಠದ ಜಗದ್ಗುರುಗಳವರು ಪಾಟ್ನಾದಲ್ಲಿ ಹಿಂದೂಧರ್ಮಪರಿಷತ್ತಿನ ಸಮ್ಮೇಳನದಲ್ಲಿ ಅವರು ಈ ಅಸ್ಪೃಶ್ಯತೆಯ ಬಗ್ಗೆ

ತಮ್ಮ ಅಭಿಪ್ರಾಯವನ್ನು ಒಂದು ರೀತಿಯಲ್ಲಿ ಏನು ವ್ಯಕ್ತಪಡಿಸಿರುತ್ತಾರೆ ಅದನ್ನು ನಮ್ಮ ಇಂಡಿಯಾ ದೇಶದಲ್ಲೇ ಅಲ್ಲ ಇಡೀ ವಿಶ್ವದಾದ್ಯಂತವೂ ಕೂಡ ಯಾರೂ ಅವರ ಅಭಿಪ್ರಾಯವನ್ನು ಒಪ್ಪುತ್ತಾರೆಂದು ನಾನು ತಿಳಿದುಕೊಂಡಿಲ್ಲ. ಅವರ ಆ ಒಂದು ಅಭಿಪ್ರಾಯ ಯಾವ ಕಾಲಕ್ಕೂ ಮಾನ್ಯತೆ ಪಡೆಯಲು ಅದು ಲಾಯಕ್ಕಾದ್ದಲ್ಲ. ಮಾನ್ಯ ಸದಸ್ಯರು ಬಹಳ ನೊಂದ ಮನಸ್ಸಿನಲ್ಲಿ ಮಾತನಾಡ ತಕ್ಕ ಭರದಲ್ಲಿ ಬಹಳ ಕಠಿಣವಾದ ಪದಗಳನ್ನು ಬೆಳೆಸಿದ್ದಾರೆ—ಆ ಜಗದ್ಗುರುಗಳನ್ನು ಚಂಡಾಲರಲ್ಲಿ ಚಂಡಾಲರು, ಮಾದಿಗರಲ್ಲಿ ಮಾದಿಗರು, ಹೊಲೆಯರಲ್ಲಿ ಅವರು ಹೊಲೆಯರೆಂದು ಹೇಳಿದ್ದಾರೆ. ದೇಶದಲ್ಲಿ ಹೊಲೆಯರು ಅನ್ನತಕ್ಕವರೇ ಇಲ್ಲ. ಬಸವಣ್ಣನವರು ಸಮಾಜದಲ್ಲಿ ಯಾರು ಹೊಲೆಯರು ಯಾರು ಮಾದಿಗರು ಎಂಬುದನ್ನು ಸ್ಪಷ್ಟವಾಗಿ ತಿಳಿಸಿದ್ದಾರೆ. ಆದರೆ ನಾನೀಗ ಆ ವಿಚಾರಕ್ಕೆ ಪ್ರವೇಶಮಾಡುವುದಿಲ್ಲ.

ಈ ದಿವಸ ಆ ಜಗದ್ಗುರು ಶಂಕರಾಚಾರ್ಯರು ಪೂರಿಯ ಪೀಠವನ್ನು ಅಲಂಕರಿಸಿದ್ದಾರೆ. ಅದನ್ನು ಆದಿ ಜಗದ್ಗುರು ಶಂಕರಚಾರ್ಯರು ಸ್ಥಾಪಿಸಿದರು; ಅದು ಬಹಳ ದೊಡ್ಡ ಪೀಠ. ಈ ಪೀಠದ ಮೂಲ ಸಂಸ್ಥಾಪಕರು ಒಂದಾನೊಂದು ಕಾಲದಲ್ಲಿ ಹಿಂದೂ ಸನಾತನ ಧರ್ಮವನ್ನು ರಕ್ಷಣೆ ಮಾಡಿದವರು. ಅಂತಹ ಹಿಂದೂ ಸನಾತನ ಧರ್ಮವನ್ನು ರಕ್ಷಣೆ ಮಾಡಿದವರು ಸ್ಥಾಪನೆ ಮಾಡಿದಂಥ ಪೀಠವನ್ನು ಅಲಂಕರಿಸಿದಂಥ ಒಬ್ಬ ಗುರು ಇವತ್ತು ಅದೇ ಹಿಂದೂಧರ್ಮಕ್ಕೆ ಅಪಖ್ಯಾತ ಮಾಡುತ್ತಿದ್ದಾರೆ. ಅದಕ್ಕೆ ದ್ರೋಹವನ್ನು ಮಾಡುತ್ತಿದ್ದಾರೆ. ಆರೀತಿ ಘಾತುಕತನವನ್ನು ಮಾಡುತ್ತಿದ್ದರೆ, ನಿಜವಾಗಿಯೂ ಅದು ಖಂಡನೀಯ.

ಇನ್ನು ಕೆಲವರು ಅವರಿಗೆ ಬಹಿಷ್ಕಾರ ಹಾಕಬೇಕು, ಅವರು ಈ ರಾಜ್ಯಕ್ಕೆ ಬಾರದಹಾಗೆ ಮಾಡಬೇಕೆಂದು ಹೇಳಿದ್ದಾರೆ. ಈ ರಾಜ್ಯದಿಂದ ಅವರು ಬಹಿಷ್ಕಾರ ಹಾಕಿಸಿಕೊಳ್ಳುವುದಕ್ಕೆ ನನ್ನ ದೃಷ್ಟಿಯಲ್ಲಿ ಅಂತಹ ದೊಡ್ಡ ವ್ಯಕ್ತಿಯಲ್ಲ ಅವರು ಹೇಳಿರತಕ್ಕ ಮಾತುಗಳನ್ನು ನಾವು ಅಲಕ್ಷ್ಯದಿಂದ ನೋಡಬೇಕೇ ವಿನಹ ಅದಕ್ಕೆ ಏನೋ ಒಂದು ದೊಡ್ಡ ಮಾನ್ಯತೆಯನ್ನು ಕೊಟ್ಟು ಅವರು ಈ ದೇಶಕ್ಕೆ ಬರಬಾರದು ಎಂಬುದಾಗಿ ಒಂದು ಆಜ್ಞೆಯನ್ನು ಹೊರಡಿಸತಕ್ಕ ಜರೂರು ಏನೂ ನನಗೆ ಕಾಣುತ್ತಾ ಇಲ್ಲ. ಪೂರಿ ಶಂಕರಾಚಾರ್ಯರು ಅಸ್ಪೃಶ್ಯತೆಗೆ ಶಾಸ್ತ್ರದ ಆಧಾರವಿದೆ, ಅದು ಹುಟ್ಟಿದಂದಿನಿಂದ ಬರುತ್ತದೆ, ಅದನ್ನು ಯಾರು ತೊಡೆದುಹಾಕುವುದಕ್ಕಾಗುವುದಿಲ್ಲವೆಂದು ಹೇಳಿದ್ದಾರೆ. ಯಾವ ಪರಿಸ್ಥಿತಿಯರ್ಥಾಗಲೀ ನಾನು ತಿಳಿದಹಾಗೆ ವೇದದಲ್ಲಿ ಆ ರೀತಿ ಉಲ್ಲೇಖಿಸಿಲ್ಲ. ನಮ್ಮ ದೇಶದಲ್ಲಿ ಮಹಾತ್ಮರು ವೇದಗಳನ್ನೇನೋ ಬರೆದಿದ್ದಾರೆ. ಆದರೆ ಶಾಸ್ತ್ರಗಳು ಎಲ್ಲಾ ಬರೆದು ಮುಗಿದಿವೆ ಎಂಬುದಾಗಿ ಭಾವನೆ ಮಾಡಿಕೊಂಡಿದ್ದರೆ ಅದು ತಪ್ಪು. ನನ್ನ ಅಭಿಪ್ರಾಯದಲ್ಲಿ ಇವತ್ತೂ ಕೂಡ ಹೊಸ ಶಾಸ್ತ್ರಗಳನ್ನು ಬರೆಯುತ್ತಿದ್ದಾರೆ. ಮನುಧರ್ಮ ಶಾಸ್ತ್ರಕ್ಕೆ ಪೂಜ್ಯತೆ ಇದೆ. ಹಿಂದೆ ಮನುಧರ್ಮ ಶಾಸ್ತ್ರದಲ್ಲಲ್ಲದ್ದುದನ್ನು ಇವತ್ತು ನಾವು ವ್ಯವಹಾರಿಕವಾಗಿ ಅನುಸರಿಸುತ್ತಿದ್ದೇವೆ. ಅದನ್ನು ಕೂಡ ತಿದ್ದುಪಡಿಮಾಡುತ್ತಿದ್ದೇವೆ.

ಶ್ರೀ ಬಿ. ವಿ. ನಾರಾಯಣಸ್ವಾಮಿ.—ಮನುಧರ್ಮಶಾಸ್ತ್ರ ಮುಗಿದಿದೆ. ಈಗ ಪರಶುರಾಮ ಧರ್ಮ ಜಾರಿಯಲ್ಲದೆ. ಇದರಲ್ಲಿ ಯಾವ ಜಾತಿ, ಮತ ಬೇಧವಿಲ್ಲ.

ಶ್ರೀ ಕೆ. ಪುಟ್ಟಸ್ವಾಮಿ.—ಈಗ ಬಂದಿರತಕ್ಕದ್ದು ಗಣತಂತ್ರ ಶಾಸ್ತ್ರ. ಅದಕ್ಕಿಂತ ಹಿಂದೆ ಹೋಗುವ ಅವಕಾಶವಿಲ್ಲ. ಅಸ್ಪೃಶ್ಯತೆ ವಿಷಯದಲ್ಲಿ ಯಾವ ವೇದದಲ್ಲ ಏನೇ ಇರಲಿ, ಉಪನಿಷತ್ತುಗಳಲ್ಲಿ ಏನೇ ಇರಲಿ, ಅದನ್ನು ಹೇಳಿರತಕ್ಕವರು ಏಷ್ಟೇ ದೊಡ್ಡವರಿರಲಿ, ಅದು ಈಗ ಮಾನ್ಯತೆಗೆ ಅರ್ಹವಾಗಿಲ್ಲ. 26-1-1950 ರಿಂದ ಬಂದಿರತಕ್ಕ ರಾಜ್ಯಾಂಗ ಶಾಸ್ತ್ರವೇ ಈ ದೇಶದ ಶಾಸನ. ಇದು ವೇದಶಾಸನವಾಗಲಾರದು, ಉಪನಿಷತ್ತು ಶಾಸನವಾಗಲಾರದು. ಪೂರಿ ಶಂಕರಾಚಾರ್ಯರು ಹೇಳಿದ ಮಾತುಗಳು ಕೂಪಮಂಡೂಕ ನ್ಯಾಯವೆಂದು ನನಗನ್ನಿಸುತ್ತದೆ. ಅಂದರೆ ಮಂಡೂಕ ಬಾವಿಯಲ್ಲಿ ವಾಸಮಾಡಿಕೊಂಡು ಅದನ್ನೇ ಸಮುದ್ರವೆಂದು ಹೇಳಿದ ಹಾಗಾಗಿದೆ. ಅವರು ಉನ್ನತ ಪೀಠದಲ್ಲಿ ಇದ್ದು, ಅನೇಕ ಸಹಸ್ರಾರು ಜನರು ಅವರಿಂದ ಶಿಷ್ಯವೃತ್ತಿ ಪಡೆದು ಪ್ರತಿ ವರ್ಷವೂ ದೊಡ್ಡ ದೊಡ್ಡ ವಿದ್ವಾಂಸರಾಗುತ್ತಿದ್ದಾರೆಂದು ಕೇಳಿದ್ದೇನೆ. ಅವರು ಇಂತಹ ಒಂದು ಪ್ರಮಾದವಾದಂಥ ಮಾತನ್ನು ಹೇಳಿ ಇಂತಹ ಒಂದು ಪರಿಸ್ಥಿತಿಗೆ ಅವರು ಸಿಕ್ಕಿಕೊಂಡಿದ್ದಾರೆ. ಅವರು ಯಾವುದಾದರೂ ಒಂದು ಅಸ್ಪೃಶ್ಯತೆಯ ವಿಷಯದಲ್ಲಿ ಮಾತ್ರ ಅವರ ಅಭಿಪ್ರಾಯವನ್ನು ಹೇಳಿದ್ದಾರೆಂದು ಹೇಳಿದರೆ ಅದು ಸರಿಯಲ್ಲ. ಅವರು ರಾಷ್ಟ್ರಗೀತೆಯ ವಿಚಾರದಲ್ಲಿಯೂ ಹೇಳಿದ್ದಾರೆ. ಅದಕ್ಕೂ ಕೂಡ ಮಾನ್ಯತೆ ಕೊಡುತ್ತಾ ಇಲ್ಲ. ಇಂತಹ ಮನುಷ್ಯರ ವಿಚಾರದಲ್ಲಿ ಏತಕ್ಕೆ ದೊಡ್ಡ ದೊಡ್ಡದಾಗಿ ಚರ್ಚೆಮಾಡಿ ಅವರಿಗೆ ಪ್ರಾಮುಖ್ಯತೆ ಕೊಡಬೇಕೋ ಗೊತ್ತಿಲ್ಲ. ಅವರ ದೃಷ್ಟಿ ಬಹಳ ಸಂಕುಚಿತವಾಗಿದೆ. ಅವರ ಮಾತು ನಾಲ್ಕು ಗೋಡೆಗಿಂತ ದೂರು ಹೋಗುತ್ತಾ ಇಲ್ಲ. ಆ ಅಭಿಪ್ರಾಯ ಅವರದೇ ವಿನಹ ಬೇರೆಯವರಿಗೆ ಅದು ಅನ್ವಯಿಸುವುದಿಲ್ಲ. ಅವರು ಹೇಳಿದ್ದನ್ನು

(ಶ್ರೀ ಕೆ. ಪುಟ್ಟಸ್ವಾಮಿ)

ನಾವು ಒಪ್ಪುವುದಿಲ್ಲ, ಅವರು ಇತ್ತೀಚೆಗೆ ಒಂದು ಪತ್ರಿಕಾ ಸಮ್ಮೇಳನವನ್ನು ಮಾಡಿ ಅವರ ಅಭಿಪ್ರಾಯಕ್ಕಾಗಿ ಅವರನ್ನು ನೇಣುಹಾಕಬಹುದೆಂದು ಹೇಳಿದರು. ನಾವು ಅಂತಹ ಹುಚ್ಚುತನಕ್ಕೆ ಹೋಗಬೇಗಾಗಿಲ್ಲ. ಬಹುಶಃ ಅವರು ಅಲ್ಲಯೇ ನೇಣು ಹಾಕಿಕೊಂಡಿದ್ದಾರೆ. ನಮ್ಮ ಹಿಂದೂ ಧರ್ಮಕ್ಕೆ ಒಂದು ದೊಡ್ಡ ಅಪಘಾತ ಮಾಡಿದ್ದಾರೆಂದು ನಾನು ಆಗಲೇ ಹೇಳಿದ್ದೇನೆ.

ಇನ್ನೊಂದು ವಿಷಯ. ಇವರ ವಿಚಾರವನ್ನು ಈ ದಿನ ನಾವು ತುಂಬಾ ಲಕ್ಷ್ಯವಿಟ್ಟು ನೋಡ ಬೇಕಾಗಿದೆ. ಅಲ್ಲದೆ ಈ ವಿಚಾರ ಕೇಂದ್ರ ಶಾಸನಸಭೆಯಲ್ಲಿ ಈಗಾಗಲೇ ಚರ್ಚೆಯಾಗಿದೆ. ಇದರ ಬಗ್ಗೆ ನಮ್ಮ ದೇಶದ ಗರಿಷ್ಠ ನಾಯಕರು ಏನುಮಾಡಬೇಕೆಂಬುದನ್ನು ಯೋಚನೆಮಾಡುತ್ತಿದ್ದಾರೆ. ಆದ್ದರಿಂದ ನೀವೂ ನಾವೂ ಯೋಚನೆಮಾಡಿ ಇದರ ಬಗ್ಗೆ ಕಳವಳಪಡಬೇಕಾಗಿಲ್ಲ. ಅವರಿಗೆ ಪ್ರಚಾರ ಸ್ವಾತಂತ್ರ್ಯ ಕೊಟ್ಟು ಈ ದೇಶದಲ್ಲಿ ಅವರು ಪ್ರಚಾರಮಾಡಲಿಕ್ಕೆ ಹೊರಟರೂ ಕೂಡ ಇವತ್ತು ಹಿಂದೂಮತ ಯಾವ ದಾರಿಯನ್ನು ಹಿಡಿದಿದೆಯೋ ಅದನ್ನು ಬದಲಾಯಿಸುವುದಕ್ಕೆ ಅವರಿಗೆ ಸಾಧ್ಯವಾಗುವುದಿಲ್ಲವೆಂಬುದಾಗಿ ನಾನು ಈ ಮಾನ್ಯ ಸಭೆಯಲ್ಲಿ ಸದಸ್ಯರಿಗೆ ಏನಂತಿಮಾಡಿಕೊಳ್ಳುತ್ತೇನೆ. ಅವರ ವಿಚಾರದಲ್ಲಿ ಅಗ್ರಹ ಮಾಡುವುದಕ್ಕಿಂತಲೂ ಅನುಕಂಪ ತೋರಿಸುವುದು ಒಳ್ಳೆಯದು. ಅವರು ಬಹಳ ಸಂಕುಚಿತಭಾವನೆಯನ್ನು ವ್ಯಕ್ತಪಡಿಸಿದ್ದಾರೆ. ಹಿಂದೆ ಶಂಕರಾಚಾರ್ಯರು ಹಿಂದೂಧರ್ಮವನ್ನು ಪುನರುದ್ಧಾರ ಮಾಡುವುದಕ್ಕೆ ಏನು ಕ್ರಮಗಳನ್ನು ಕೈಗೊಂಡಿದ್ದರೋ ಅದನ್ನು ಅಳಿಸುವುದಕ್ಕೆ ಇವರು ಪ್ರಯತ್ನಮಾಡುತ್ತಿದ್ದಾರೆ. ಆದ್ದರಿಂದ ನಮಗೆ ವೇದ, ಉಪನಿಷತ್ತು, ಶಾಸ್ತ್ರ ಎಲ್ಲವೂ ರಾಜ್ಯಾಂಗಶಾಸನವೇ ಹೊರತು ಬೇರೊಂದಿಲ್ಲವೆಂದು ಹೇಳುವುದಕ್ಕೆ ನಾನು ಅಪೇಕ್ಷೆಪಡುತ್ತೇನೆ.

Papers laid on the Table

(Contd.)

SECRETARY.—I lay on the Table the first list of Unstarred Questions and Answers.

UNSTARRED QUESTIONS AND ANSWERS

Sanction of Grant towards rent of the Buildings of Aided High School

2. **Sri P. V. AITHALA** (Surathkal).—

Will the Minister for Education be pleased to state :—

(*a*) whether it is a fact that after the introduction of the scheme of direct payment of salary to teachers of Aided High Schools, the grant towards the rent of the buildings of the said High Schools is not being paid;

(*b*) if the answer to (*a*) above is in the affirmative the reasons for not giving the grant towards rent?

Sri K. V. SHANKARA GOWDA (Minister for Education).—

(*a*) No.

(*b*) Does not arise in view of reply to clause (*a*) above.